ಕೇಂದ್ರದಲ್ಲಿನ ಪಶು ಪರೀಕ್ಷಕರ ಹುದ್ದೆಯನ್ನು ಬಳ್ಳಾರಿ ಜಿಲ್ಲೆ ಹಿರೇಹಡಗಲಿಗೆ ವಿಲೀನವಾಗಿರುವುದರಿಂದ ಹಾಲಿ ದೇವಲಾಪುರದಲ್ಲಿ ಪಶುಪರೀಕ್ಷಕರ ಹುದ್ದೆಯು ಇರುವುದಿಲ್ಲ. ಅಲ್ಲಿ ಹೊಸದಾಗಿ ಪಶು ಪರೀಕ್ಷಕರ ಹುದ್ದೆಯನ್ನು ಸೃಷ್ಟಿಸಬೇಕಾಗಿರುತ್ತದೆ, ಸೃಷ್ಟಿಸದ ಹೊರತು ನೇಮಕಾತಿ ಮಾಡಲು ಸಾಧ್ಯವಾಗುವುದಿಲ್ಲ.

ಪಶು ಪರೀಕ್ಷಕರ ಹುದ್ದೆಯು 'ಸಿ' ಗುಂಪಿಗೆ ಸೇರಿದ ಹುದ್ದೆಯಾಗಿರುವುದರಿಂದ ಈ ಹುದ್ದೆಯನ್ನು ಸೃಜಿಸುವ ಅಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಪರಿಷತ್ತಿಗೆ ಇರುತ್ತದೆ. ಆದ ಪ್ರಯುಕ್ತ ಈ ಹುದ್ದೆಯನ್ನು ಸೃಜಿಸಲು ಬೆಳಗಾವಿ ಜಿಲ್ಲೆಯ ಜಿಲ್ಲಾ ಪರಿಷತ್ತಿನವರೇ ಅವಶ್ಯಕ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ನೆಕ್ಸ್ಟ್ ಪ್ರಿವಿಲೇಜ್ ನೋಟೀಸ್ ಇದೆ. ನಾಗರತ್ನಮ್ಮನವರೇ, ನಿಮ್ಮದು ಟೈಂ ಬಾರ್ ಆಗಿ ಬಂದಿತ್ತು. I would have rejected it summarily but I will not reject it. ನಿಮ್ಮದು ಮೂರು ಇದೆ. ಮೂರನ್ನೂ ತೆಗೆದುಕೊಳ್ಳುತ್ತೇನೆ. ಈಗ ವೆಂಕಟರಾಮಯ್ಯನವರದ್ದು ಪ್ರಿವಿಲೇಜ್ ನೋಟೀಸ್ ಇದೆ, ಅದನ್ನು ಮೊದಲು ತೆಗೆದು ಕೊಳ್ಳೋಣ.

ಹಕ್ಕು ಚ್ಯುತಿಯ ಪ್ರಸ್ತಾಪ

ವಿಶ್ವಭಾರತಿ ಸಹಕಾರ ಗೃಹ ನಿರ್ಮಾಣ ಸಂಸ್ಥೆಯ ಮೇನೆಜಿಂಗ್ ಡೈರೆಕ್ಟರ್ ಶ್ರೀ ಬಿ. ಕೃಷ್ಣಭಟ್‌ರವರು ವಿಧಾನಸಭಾ ಸದಸ್ಯರ ಮೇಲೆ ಮಾಡಿರುವ ಆಪಾದನೆಗಳ ಕುರಿತು

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ನಾನು ಬಿ.ಡಿ.ಎ. ಸೈಟುಗಳ ಬಗ್ಗೆ ಇಲ್ಲಿ ಪ್ರಶ್ನೆ ಕೇಳಿದಾಗ ಮಾನ್ಯ ಬಿ.ಡಿ.ಎ. ಮಂತ್ರಿಗಳು ಕೊಟ್ಟ ಉತ್ತರದ ಬಗ್ಗೆ ಗಿರಿನಗರದ ಕೃಷ್ಣಭಟ್ ಎಂಬುವರು ನಿರಾಕರಣೆಮಾಡಿ ವಿಧಾನಸಭಾ ಸದಸ್ಯರ ಮೇಲೆ ಮತ್ತು ವಿಧಾನಸಭೆಯ ಮೇಲೆ ಅನೇಕ ಆರೋಪಗಳನ್ನು ಮಾಡಿದ್ದಾರೆ. ಸ್ಪಷ್ಟವಾಗಿ ಅವರೇ ಪಬ್ಲಿಕೇಷನ್‌ನನ್ನು 24-3-1988 ರಂದು ಪತ್ರಿಕೆಯಲ್ಲಿ ಕೊಟ್ಟುಬಿಟ್ಟಿದ್ದಾರೆ. ಅದು ಈ ರೀತಿ ಇದೆ:

> ''ವಿಧಾನ ಮಂಡಲದಲ್ಲಿ ಸಂವಿಧಾನಾತ್ಮಕವಾಗಿ ಶಾಸಕರಿಗೆ ಲಭ್ಯವಿರುವ ವಿಶೇಷ ಸೌಲಭ್ಯ ಮತ್ತು ರಕ್ಷಣೆಯು ಶಾಸಕರು ತಮ್ಮ ಮನ ತೋರಿದಂತೆ ವರ್ತಿಸುವುದಕ್ಕೂ ಮತ್ತು ಬಾಯಿಗೆ ಬಂದಂತೆ ಮಾತನಾಡುವುದಕ್ಕೂ ಪರವಾನಗಿ ಅಲ್ಲ'' ಎಂದು ಇದೆ.

ಅಧ್ಯಕ್ಷರು.—ತಾವು ಓದುವುದು ಬೇಡ, ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಆದುದರಿಂದ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದರಿಂದ ನಮ್ಮ ಹಕ್ಕುಬಾಧ್ಯತೆ ಸಮಸ್ಯೆ ಉಂಟಾಗಿದೆ. ಈ ರೀತಿಯಾದರೆ ನಾವು ಸದನದಲ್ಲಿ ಕೆಲಸ ಮಾಡುವು ದಕ್ಕಾಗುವುದಿಲ್ಲ. ಇದು ಕ್ಲಿಯರ್ ಕೇಸ್ for Breach of Privilege and it may kindly be referred to the Privileges Committee.

MR. SPEAKER.—I refer it to the Committee on Privileges of the House.

SRI A. LAKSHMISAGAR.—Sir, I seek your permission to raise a question involving the Breach of Privilege of this House by no less a person than Mr. Janardhana Poojary, the KPCC(I) President and also the Minister of State for Rural Development in the Union Government. Sir, this gentleman was addressing his party MLAs on 13th June and the report of his speech to those

gentlemen MLAs is reported in Hindu, the prestigious newspaper of this country dated 14th June 1981. I will read only the relevant of the press report.

> "The KPCC(I) president, Mr. Janardhana Poojary, has urged his party MLAs to stall the proceedings of the State Assembly on issues like the Chief Minister, Mr. Ramakrishna Hegde's reference to the Brigade Road culture and the former Minister Mr. H.D. Devegowda's reported remarks on gambling by Janatha Ministers.
>
> Addressing party workers belonging to the Bangalore City and Rural District units, here today, he wanted his MLAs to demand the names of the Ministers who had last Rs. 1 lakh each in gambling in a single night. Though he did not know what Brigade Road signified as he had not visited it, he wanted to know who were those MLAs frequenting it.
>
> Mr. Poojary said it was not enough if his party MLAs had raised an issue of privelege about Mr. Hegde's reference to the Brigade Road culture. The committee might submit a report after a long lapse of time and the issue would be forgotton.
>
> Instead, Congress(I) legislatures should not allow the proccedings of the House to go on. They should, however not indulge in violence. If his partymen stalled the business, their action would receive wide publicity in the newspapers, radio and television."

This is what he has reported to have told his partymen on 13th in Bangalore.

ಶ್ರೀ ಪಟ್ಟವಂಕಿ ರತ್ನಾಕರ್.—ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಏತಕ್ಕೆ ಪಾಯಿಂಟ್ ಆಫ್ ಆರ್ಡರ್.

Sri A. LAKSHMISAGAR.—We have given the notice along with paper cutting. I have not yet completed. Let me complete.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

(ಗೊಂದಲ)

ಶ್ರೀ ಪಟ್ಟವಂಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೆ, ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರವನು ಪ್ರಧಾನವಾಗಿಟ್ಟುಕೊಂಡು ಮಾನ್ಯ ಲಕ್ಷ್ಮೀಸಾಗರ್‌ರವರು ಹಕ್ಕುಚ್ಯುತಿ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಕಾಂಗ್ರೆಸ್ ಪಕ್ಷದ ಶಾಸಕನಾಗಿ ಹೇಳುವುದಾದರೆ, ಪಕ್ಷದ ಅಧ್ಯಕ್ಷರಿಂದ ನಮಗೆ ಯಾವುದೇ ರೀತಿಯಾದಂಥ ಆದೇಶಗಳು ಬಂದಿಲ್ಲ. ಆದ್ದರಿಂದ ಅವರು ಯಾವುದೋ ಸಭೆಯಲ್ಲಿ ಹೇಳಿರತಕ್ಕ ಮಾತುಗಳನ್ನು ಆಧಾರವಾಗಿಟ್ಟುಕೊಂಡು ಹಕ್ಕು ಚ್ಯುತಿಯಾಗುತ್ತದೆಂದು ಹೇಳುವುದು ಸರಿಯಲ್ಲ.

SRI RAMESH KUMAR.—Don't behave in all matters like this· your senior members are there.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಕಾನೂನು ಮಂತ್ರಿಗಳು ಮೊನ್ನೆ ಹಿಂದೆ ಕೊಟ್ಟಂತಹ ರೂಲಿಂಗ್‌ಗಳನ್ನು ಖೋಟ್ ಮಾಡಿ ಹೇಳಿದ್ದಾರೆ. ಕಾಂಗ್ರೆಸ್ ಪಾರ್ಟಿಯೊಳಗೆ ಸದಸ್ಯರುಗಳನ್ನು ಉದ್ದೇಶಿಸಿ ''ರಾಸ್ಕಲ್'' ಎಂದು ಹೇಳಿದರೂ ಆ ಪದ ಸಹ ಅನ್‌ಪಾರ್ಲಿಮೆಂಟರಿ ಆಗುವುದಿಲ್ಲ, ಪ್ರಿವಿಲೇಜ್ ಆಗುವುದಿಲ್ಲ ಎಂದು ಹೇಳಿದ್ದರು. ಅವರು ಪಾರ್ಟಿ ಮೀಟಿಂಗ್‌ನಲ್ಲಿ ಏನು ಹೇಳಿದ್ದಾರೆ ಎನ್ನುವುದು ಗೊತ್ತಿಲ್ಲ. ಆದ ಕಾರಣ ಅವರು ಹೀಗೆ ಹೇಳುವುದು ಸರಿಯಲ್ಲ. ಪತ್ರಿಕೆಗಳಲ್ಲಿ ಬಂದಿದ್ದರ ಮೇಲೆಲ್ಲಾ ಪ್ರಿವಿಲೇಜ್ ತರುತ್ತೇವೆಂದರೆ ನನ್ನ ಅಭ್ಯಂತರವೇನೂ ಇಲ್ಲ. ಅನೇಕ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಬಂದಿರುವುದರ ಮೇಲೆ ಪ್ರಿವಿಲೇಜ್ ತರಬಾರದೆಂದು. ಲಕ್ಷ್ಮೀಸಾಗರ್‌ವರು ಮತ್ತು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ಪಕ್ಷ ಅವರು ಹಾಗೆ ಹೇಳಿದ್ದರೆ ನಾವು ಕಾಂಗ್ರೆಸ್ ಪಾರ್ಟಿ ಬಿಟ್ಟು ಹೊರಗೆ ಬರಬೇಕಾಗುತ್ತದೆ. ನಾನು ಪಾರ್ಟಿ ಹುಕುಂ ಪಾಲನೆ ಮಾಡಬೇಕಾಗುತ್ತದೆ. ಆದೇಶಕೊಟ್ಟಿದ್ದರೆ ಇವೊತ್ತು ಪಾಲನೆ ಮಾಡುತ್ತಿದ್ದೆವು. ಆದರೆ ನಾವು ಇಂದು ಧನವಿನಿಯೋಗ ಮಸೂದೆಯನ್ನು ಪಾಸ್ ಮಾಡಿಕೊಟ್ಟ ಮೇಲೆ ಈ ರೀತಿ ಏತಕೆ ?

(ಗೊಂದಲ)

ಶ್ರೀ ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಇದು ಪ್ರಿವಿಲೇಜ್ ಆಗುತ್ತದೆಯೋ, ಇಲ್ಲವೋ ಎನ್ನುವ ಬಗ್ಗೆ ಹೇಳುವುದು ಬೇಡವೇ ?...

MR. SPEAKER.—You have given sent per cent co-operation to the ruling party.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ಸರ್ವಜ್ಞರಾದಂಥ ಲಕ್ಷ್ಮೀಸಾಗರ್ ಅವರಾದ ಲಾ-ಮಿನಿಸ್ಟರ್‌ರವರಿಗೆ ಎರಡು ನಾಲಿಗೆ ಇದೆ. ಏತಕ್ಕೆ ಎನ್ನುವುದನ್ನು ಹೇಳುತ್ತೇನೆ ಕೇಳಿ. ಇವರು ಒಂದು ಸಾರಿ ತಮ್ಮ ಪಾರ್ಟಿಗೆ ಬೇಕಾದ ಹಾಗೆ ಒಂದು ರೂಲ್ ತೆಗೆಯುತ್ತಾರೆ, ಇನ್ನೊಂದು ಸಾರಿ ಇನ್ನೊಬ್ಬರಿಗೆ ಬೇಕಾದ ಹಾಗೆ ಇನ್ನೊಂದು ರೂಲ್ ತೆಗೆಯುತ್ತಾರೆ, ಮೊನ್ನೆ ದಿವಸ ರಘುಪತಿಯವರು ಬೊಮ್ಮಾಯಿಯವರು ಇವರೆಲ್ಲರೂ ಸೇರಿಕೊಂಡು ಈ ಸಭೆಗೆ ಅಸತ್ಯ ಹೇಳಿದರು. ಅಸತ ಸುಳ್ಳು ಹೇಳಿ ಈ ಮನೆಯನ್ನು ತಪ್ಪುದಾರಿಗೆ ಎಳೆದಿದ್ದಾರೆ ಲಾ ಮಿನಿಸ್ಟರ್ ಹಾಗೂ ಪಾರ್ಲಿಮೆಂಟರಿ ಮಿನಿಸ್ಟರ್ ಆಗಿರುವವರು ಗೊತ್ತಿದ್ದು, ಗೊತ್ತಿದ್ದು, ಈ ಮನೆಯನ್ನು ತಪ್ಪುದಾರಿಗೆ ಎಳೆಯಲಿಕ್ಕೆ ಶುರು ಮಾಡಿದರು. ನಮ್ಮ ಸಭೆಯಲ್ಲಿ ಆನೆ ಹೋಯಿತಂತೆ, ಆದು ಹೋಯಿತಂತೆ, ಹಸು ಹೋಯಿತಂತೆ, ಎಂದು ಹೇಳುವುದು. ಬಹಳ ಉದ್ಧಾರ ಮಾಡುವಂಥ ಹಿಂದೂ ಪೇಪರ್‌ನವರನ್ನು ನಾವು ಇನ್‌ವೈಟ್ ಮಾಡಿದ್ದೇವಾ ? ನಾವು ಪ್ರೆಸ್‌ನವರನ್ನೇನಾದರೂ ಕರೆಸಿದ್ದವಾ ? ಯಾರೋ ದಾರಿ ಹೋಕರು, ಯಾರು ಯಾರೋ ಹೇಳಿದನ್ನು ಪ್ರೆಸ್ ಅವರು ಹಾಕಿಸಿ ಬಿಟ್ಟಾಕ್ಷಣ ಇವರು ಇಲ್ಲಿ ಬಂದು ಇದು ಪ್ರಿವಿಲೇಜ್ ಆಗುತ್ತದೆ ಎಂದು ಹೇಳುತ್ತಿದ್ದಾರೆ. ನಾವು ಕೂಡ ಇಲ್ಲಿ ಕಳೆದ ೩೦-೩೫ ವರ್ಷಗಳಿಂದ ಕುಳಿತು ಅಭ್ಯಾಸ ಮಾಡಿ ನಿಯಮಗಳನ್ನು ತಿಳಿದುಕೊಂಡಿರುವ ಅನೇಕ ಜನರಿದ್ದೇವೆ. ನಮ್ಮ ಅಧ್ಯಕ್ಷರು ಏನಾದರೂ ಹೇಳಿದರೆ ಆ ತರಹ ಹೇಳಬಾರದು ಎಂದು ಹೇಳುವ ಯೋಗ್ಯತೆ ಪಡೆದಿರುವ ಜನರು ಇದ್ದೇವೆ. ಅವರು ಚಿಕ್ಕವರಿರಲಿ, ದೊಡ್ಡವರಿರಲಿ, ಅಧ್ಯಕ್ಷರಾದವರಿಗೆ ಎಷ್ಟು ಮರ್ಯಾದೆಯನ್ನು ಕೊಡಬೇಕೆಂಬುದನ್ನು ನಾವು ಕಲಿತುಕೊಂಡಿದ್ದೇವೆ. ಅಂತಾದ್ದರಲ್ಲಿ, ನಮ್ಮ ಸಭೆಯಲ್ಲಿ ಆಗಿರುವುದನ್ನು ಯಾವುದೋ ಒಂದು ಪೇಪರ್‌ನವರು ಬರೆದರು ಎಂದು ದೊಡ್ಡದಾಗಿ ಪ್ರಿವಿಲೇಜ್ ತಂದಿದ್ದಾರೆ. ಇವರು ಮಾಡಿರುವ ತಪ್ಪುಗಳನ್ನು ಯಾರೂ ಕೇಳುವವರು ಇಲ್ಲ. ಮಾನ್ಯ ಬೊಮ್ಮಾಯಿಯವರು ಮಾನ್ಯ ರಘುಪತಿಯವರು ಎಲ್ಲರಿಗಿಂತಲೂ ಲಕ್ಷ್ಮೀಸಾಗರ್ ಅವರು ಈ ಮನೆಯಲ್ಲಿ ಅಸತ್ಯ ಹೇಳಿ, ತಪ್ಪುದಾರಿಗೆ ಎಳೆದು ಸುಳ್ಳು ಹೇಳಿ, ಅಡ್ಮಿಟ್ ಆಗದೇ ಇರುವ ರಿಟ್ ಪಿಟೀಷನ್ ಸಬ್‌ಜ್ಯುಡೀಸ್ ಆಗುತ್ತದೆಂದು ಹೇಳಿ ಸಭೆಯನ್ನು ತಪ್ಪುದಾರಿಗೆ ಎಳೆದಿದ್ದಾರೆ. ಆದ್ದರಿಂದ, ಮೊದಲು ಈ ವಿಚಾರದಲ್ಲಿ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳಬೇಕಾಗಿತ್ತು. ನಾವು ಕೊನೆಯ ದಿವಸ ಆದದ್ದು ಆಯಿತು ಹೋದದ್ದು ಹೋಯಿತು ಎಂದು ಬಿಟ್ಟರೆ ಇವರು ದೊಡ್ಡದಾಗಿ ಪ್ರಿವಿಲೇಜ್ ಮೋಷನ್ ತೆಗೆದುಕೊಂಡು ಬಂದಿದ್ದಾರೆ. ಮೊದಲು ಇವರು ಮಾಡಿರುವುದನ್ನು

ಪ್ರಿವಿಲೇಜ್ ಮೋಷನ್ ಆಗಿ ತೆಗೆದುಕೊಂಡು ಇವರಿಗೆ ಕೊಡುವ ಶಿಕ್ಷೆ ಮೊದಲು ಕೊಟ್ಟು, ಅನಂತರ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಈಗ ಅವರು ನನ್ನ ಹೆಸರು ಹೇಳಿದ್ದಾರೆ. ನಾವು ಸುಳ್ಳು ಹೇಳಿದ್ದೇವೆಂದು ಹೇಳಿದ್ದಾರೆ. ಇದು ಬಹಳ ಗಂಭೀರವಾದಂಥ ವಿಷಯ. ನಾವು ಸುಳ್ಳು ಹೇಳಿದ್ದೇವೆಂದು ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದಾರೆ. ಆ ರೀತಿ ನಾವು ಹೇಳಿದ್ದರೆ ತಮಗೆ ನಮ್ಮನ್ನು ನಿಯಂತ್ರಣ ಮಾಡಲಿಕ್ಕೆ ಹಕ್ಕು ಇದೆ. ಯಾವುದು ಕೋರ್ಟ್ ಎದುರಿನಲ್ಲಿದೆ ಅದು ಸಬ್‌ಜ್ಯುಡಿಸ್ ಎಂದು ಹೇಳಿದ್ದೇವೆ. ಬೇಕಾದರೆ ಇವೊತ್ತು ನಮ್ಮ ಮೇಲೆ ಪ್ರಿವಿಲೇಜ್‌ಮೋಷನ್ ಮೂವ್ ಮಾಡಲಿ. ಅವರಿಗೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಲಿಕ್ಕೆ ಅಧಿಕಾರ ಇದೆ, ಅವರು ಮೂವ್ ಮಾಡಲಿ ಎಂದು ಈಗಲೂ ಹೇಳುತ್ತಿದ್ದೇನೆ. ನಾವು ಸುಳ್ಳು ಹೇಳಿದ್ದೇವೋ, ಅವರು ಸುಳ್ಳು ಹೇಳಿದ್ದಾರೊ ಎಂಬುದು ಚರ್ಚೆಯಾದರೆ ಇಡೀ ದೇಶಕ್ಕೆ ಗೊತ್ತಾಗುತ್ತದೆ, ಪ್ರಪಂಚಕ್ಕೆ ಗೊತ್ತಾಗುತ್ತದೆ. ಪತ್ರಿಕೆಯಲ್ಲಿ ಈ ಬಗ್ಗೆ ಏನು ಬಂದಿದೆ, ಅದನ್ನು ಇವರು ನಿರಾಕರಣೆ ಮಾಡಬಹುದಿತ್ತು. ಈ ಸದನಕ್ಕೆ ಸಂಬಂಧಪಟ್ಟ ವಿಷಯವಾಗಿದ್ದರೆ ನಿರಾಕರಣೆ ಮಾಡಬಹುದಿತ್ತು ಇನ್ನು ಎರಡನೆಯದಾಗಿ ಯಾವ ಪತ್ರಿಕೆಯಲ್ಲಿ ಇದು ಬಂದಿದೆ ಆ ಪತ್ರಿಕೆಯ ಮೇಲೆ ಪ್ರಿವಿಲೇಜ್ ಮೋಷನ್‌ನ್ನು ಮೂವ್ ಮಾಡ ಬೇಕಾಗಿತ್ತು, ಅದನ್ನು ಡಿನೈ ಮಾಡಬೇಕಾಗಿತ್ತು. ಆದ್ದರಿಂದ ಇವರೇ ಶುದ್ಧ ಸುಳ್ಳು ಹೇಳಿದ್ದಾರೆಂದು ನಾನು ಹೇಳಿದರೆ ಅದು ಸರಿಯಾಗುತ್ತದೆಯೇ? ಜನಾರ್ಧನ ಪೂಜಾರಿಯವರ ಪರವಾಗಿ ಇವರೇ ಶುದ್ಧ ಸುಳ್ಳು ಹೇಳುತ್ತಿದ್ದಾರೆಂದು ನಾನು ಹೇಳಿದರೆ ಅದು ಸರಿಯಾಗುತ್ತದೆಯೇ ?

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪಟ್ಟಮಕ್ಕಿ ರತ್ನಾಕರ್ ರವರು ಒಂದು ವಿಧಿ ಬಿಂದುವನ್ನು ಎತ್ತಿದರು. ಅದು ಬಹಳ ಸಾದುವಾದುದು ಎಂದು ಅನಿಸುತ್ತದೆ. ಮೆರಿಟ್ ಆಫ್ ದಿ ಕೇಸ್ ಬಗ್ಗೆ ಕೂಡ ವಿಧಿ ಬಿಂದುವನ್ನು ಎತ್ತುವ ಕ್ರಮ ಸರಿಯಾಗಿದೆ. ರೂಲ್ಸ್ ಆಫ್ ಪ್ರೊಸೀಜರ್‌ನ ಛಾಪ್ಟರ್ ೧೧ರಲ್ಲಿ "A member may with the consent of the Speaker raise a question involving breach of privilege. ಎಂದು ಇದೆ. ಅಂದರೆ ನೋಟೀಸನ್ನು ಯಾವಾಗ ಕೊಡಬೇಕೆಂದು ನಿಯಮ ಇದೆ. ಅದರಂತೆ ನಿಯಮ ೧೯೧ರ ಪ್ರಕಾರ ನಾವು ನೋಟೀಸನ್ನು ಕೊಟ್ಟಿದ್ದೇವೆ. ಬಹುಶಃ ಇದು ಸರಿಯಾಗಿದೆ ಎಂದು ನಾನು ಭಾವಿಸಿದ್ದೇನೆ. ಇದನ್ನು ಯಾವಾಗ ರೈಜ್ ಮಾಡಬೇಕೆಂದು notice must be in order as far as rule 193 is concerned. ಇದನ್ನು ಬಹುಶಃ ನಿಯಮ ೧೯೩ರಲ್ಲಿ ಪ್ರೊವಿಷೋವಿನ್ನು ದಯವಿಟ್ಟು ನೋಡಿದರೆ ತಿಳಿಯುತ್ತದೆ...

> "Provided further that the Speaker may, if he is satisfied about the urgency of the matter, allow a question ar privilege to be raised at any time during the course of a sitting after the disposal of questions"

ಅದೂ ಕೂಡ ಪ್ರಶ್ನೋತ್ತರ ಆದ ಕೂಡಲೇ, ಇದನ್ನು ಎತ್ತಬಹುದು. it should be raised immediately after the question hour.

ಅಧ್ಯಕ್ಷರು.—ನೀವು ಏನು ಹೇಳುತ್ತಿದ್ದೀರಿ ಅದು ನಿಜವಾಗಿಯೂ ಸರಿಯಾಗಿದೆ. ನೀವು ಹೇಳುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆ ದಿವಸದಿಂದಲೂ ಕೂ ಇವತ್ತು ಬೇಡ, ಎಂದು ನಾನೇ ಮುಂದಕ್ಕೆ ಹಾಕಿಕೊಂಡು ಬಂದೆ. ಈಗ ಅವರೇ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಒಂದು ನಿಮಿಷ ಸುಮ್ಮನಿದ್ದರೆ ಹೇಳುತ್ತೇನೆ. ಇವತ್ತು ಕ್ವೊಶ್ಚನ್ ಅವರ್....

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಪ್ರಶ್ನೆ ಮುಗಿದ ಮೇಲೆ ಅವರು ಎತ್ತಲಿ. ಏಕೆಂದರೆ ತಾವು ಆ ದಿವಸ ಕೂಡ ಇದನ್ನು ಎತ್ತಲಿಕ್ಕೆ ಬಿಡಲಿಲ್ಲ. ಈ ದಿವಸ ಎತ್ತಿದರೂ......

ಅಧ್ಯಕ್ಷರು.—ಅವರು ಪ್ರತಿ ದಿವಸವೂ ಕೂಡ ಹೇಳುತ್ತಾ ಬಂದಿದ್ದಾರೆ. ಆದರೆ ನಾನೇ ಮುಂದಕ್ಕೆ ಹಾಕುತ್ತಾ ಬಂದಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ರೂಲ್ಸ್‌ನ್ನು ಸಸ್ಪೆಂಡ್ ಮಾಡುವುದಕ್ಕಾಗುವುದಿಲ್ಲ. ಇದು ಮಾನ್‌ಡೇಟರಿ. ಏಕೆಂದರೆ,

> "provided further that the Speaker may, if he is satisfied about the urgency of the matter, allow a question of privilege to be raised at any tine during the course of a sitting after the disposal of questions"

"immediately after the disposal of the questions" it should have been raised. ಕೊಶ್ಚನ್ ಅವರ್ ಆದಕೂಡಲೇ ಇದನ್ನು ಎತ್ತಿದ್ದಾರೆಯೋ ? It has not been done.

ಅಧ್ಯಕ್ಷರು.—ಅವರು ಎತ್ತಿದ್ದಾರೆ. ನಾನು ಏನು ಹೇಳಿದೆ ಎಂದರೆ ಮಾನ್ಯ ವೆಂಕಟರಾಮಯ್ಯನವರದ್ದು, ಇವರದ್ದು, ಅವರದ್ದು ಎಲ್ಲವನ್ನೂ ಸೇರಿಸಿ ಒಟ್ಟಿಗೆ ಆಮೇಲೆ ತೆಗೆದುಕೊಳ್ಳೋಣ ಎಂದು ನಾನು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಕೊಶ್ಚನ್ ಅವರ್ ಆದಕೂಡಲೇ ಅವರು ಎತ್ತಬಹುದಿತ್ತು. ಆದರೆಅವರು ಎತ್ತಲಿಲ್ಲ.

ಅಧ್ಯಕ್ಷರು.—ಕೊಶ್ಚನ್ ಅವರ್ ಆದಕೂಡಲೇ ಅವರು ಹೇಳಿದರು. ಆದರೆ ಈಗ ಬೇಡ ಮಧ್ಯಾಹ್ನ ತೆಗೆದುಕೊಳ್ಳೋಣ ಎಂದು ನಾನು ಹೇಳಿದೆ. "The Speaker may allow a question of privilege to be raised at any time during the course of a sitting" "At any time during the course of a sitting" means,......

Sri M. VERAPPAMOILY.—I don't think it can be raised at any time.

ಅಧ್ಯಕ್ಷರು.—ನಾನು ಅವರಿಗೆ ಅಲೋ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—If all the members had been allowed ಹಾಗಿದ್ದರೆ ಇನ್ನೊಂದು ಮುಂದಿನದು ತೆಗೆದುಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ಒಂದು ಪ್ರಿವಿಲೇಜ್ ಮೋಷನ್ ಇದೆ. ನಾವು ಮೂವ್ ಮಾಡಿದ್ದೇವೆ. ಅದನ್ನಾದರೂ ಈಗ ತೆಗೆದುಕೊಳ್ಳಬಹುದಿತ್ತು...

ಅಧ್ಯಕ್ಷರು.—ಕೊಶ್ಚನ್ ಅವರ್ ಆದಕೂಡಲೇ ವೆಂಕಟರಾಮಯ್ಯನವರು ಎದ್ದರು. ಇವರೂ ಎದ್ದರು. ಆಗ ನಾನು ಹೇಳಿದೆ, ಈ ಮೂರನ್ನೂ ಮಧ್ಯಾಹ್ನ ತೆಗೆದುಕೊಳ್ಳೋಣ ಎಂದು. ಶ್ರೀಮತಿ ನಾಗರತ್ನಮ್ಮನವರೂ ಕೂಡ ಐ ಆರ್ ನಾಟ್ ಪ್ರೆಸ್ಸಿಂಗ್ ಎಂದು ಹೇಳಿದರು. ಅದಕ್ಕೆ ನಾನೇ ಥ್ಯಾಂಕ್ಯು ಮೇಡಂ ಎಂದು ಹೇಳಿದ್ದೇನೆ. ಮತ್ತೆ ನಾವು ಇದನ್ನು ಎತ್ತುವುದಿಲ್ಲ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ರೂಲ್ ೧೯೦ನಲ್ಲಿ ಏನಿದೆ ? ಸಿಟಿಂಗ್ ಮೊದಲೇ ನೋಟೀಸ್ ಕೊಡಬೇಕೆಂದಿದೆ. ನಾವು ನೋಟೀಸ್ ಕೊಟ್ಟಿದ್ದೇವೆ,

ಅಧ್ಯಕ್ಷರು.—ನಾನು ಈಗ ಅವರಿಗೆ ಪರ್ಮಿಷನ್ ಕೊಟ್ಟಿದ್ದೇನೆ. ಇವತ್ತು ಮಧ್ಯಾಹ್ನ ಅವರು ಎತ್ತಿದ್ದಾರೆ. ಮಾನ್ಯ ವೆಂಕಟರಾಮಯ್ಯನವರೂ ಎತ್ತಿದ್ದಾರೆ, ಇವರೂ ಎತ್ತಿದ್ದಾರೆ.......

(ಗೊಂದಲ)

ಅಧ್ಯಕ್ಷರು.--ಆಗಲೇ ಮೇಡಂನವರು ಏನು ಹೇಳಿವರು ಎಂದರೆ ನಾವು ಇದನ್ನು ಮತ್ತೆ ಎತ್ತುವುದಿಲ್ಲ ಎಂದು ಹೇಳಿದ್ದಾರೆ. ಆದಕ್ಕೆ ನಾನು ಥ್ಯಾಂಕ್ಸ್ ಎಂದು ಹೇಳಿದೆ.

(ಗೊಂದಲ)

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.--ಮಾನ್ಯ ಅಧ್ಯಕ್ಷರೇ, ನಾವೂ ಕೂಡ ಮಾನ್ಯ ಲಕ್ಷ್ಮೀಸಾಗರ್‌ರವರ ಮೇಲೆ ಪ್ರಿವಿಲೇಜ್ ಕೊಟ್ಟಿದ್ದೇವೆ. ಈಗ ಅದರಮೇಲೆ ಚರ್ಚೆಯಾಗಬೇಕು.

ಅಧ್ಯಕ್ಷರು.—ಅದನ್ನೂ ಅಲೋ ಮಾಡುತ್ತೇನೆಂದು ಹೇಳಿದ್ದೇನೆ. ನಿಮಗೆ ವಿಷಯ ನಾನು ಹೇಳಿದ್ದೇನೆಂದರೆ ಕೊಶ್ಚನ್ ಅವರ್ ಮುಗಿದ ಕೂಡಲೇ ಮಾನ್ಯ ವೆಂಕಟರಾಮಯ್ಯನವರು ಎತ್ತಿದರು. ಇವರು ಎತ್ತಿದರು ನಾನು ಅವರಿಗೆ ಹೇಳಿದ್ದೇನೆಂದರೆ ಟೈಮ್ ಆದನಂತರ ಕೊಟ್ಟಿದ್ದೀರಿ. ಟೈಮ್‌ಗೆ ಸರಿಯಾಗಿ ಕೊಡಲಿಲ್ಲ. ಆದರೂ ತೆಗೆದುಕೊಳ್ಳುತ್ತೇನೆಂದು ಹೇಳಿದೆ. ಮುಂದೆ ಅಮ್ಮನವರು ನಾವು ಆ ಪ್ರಶ್ನೆಯನ್ನು ಎತ್ತುವುದಿಲ್ಲವೆಂದು ಹೇಳಿದರು. ಅದಕ್ಕೆ ಥ್ಯಾಂಕ್ಸ್ ಹೇಳಿದೆ. ಈಗ ಅವರು ಕೇಳುತ್ತೇನೆಂದು ಹೇಳಿದ್ದಾರೆ. ಆದಕ್ಕೆ ನಾನು ಆಗಬಹುದೆಂದು ಹೇಳಿದೆ. ಈಗ ಅವರದ್ದು ಮುಗಿಸೋಣ; ಆಮೇಲೆ ನಿಮ್ಮದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈಗ ತಾವು ಅಲೋ ಮಾಡುವುದು ತಪ್ಪಾಗುತ್ತದೆ. ಈಗ ನಾವೂ ಕೂಡ ಅಧಿವೇಶನ ಸೇರುವ ಮೊದಲೇ ಕೊಡಲಿಲ್ಲ. ಆದರೂ ಅದನ್ನು ಎತ್ತಲಿಕ್ಕೆ ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದೀರಿ. ಸಾರಾಸಗಟು ಹೀಗೆ ಅವಕಾಶ ಕೊಡುತ್ತಿದ್ದರೆ ಇದು ಎಲ್ಲಿಗೆ ಅಂತ್ಯಗೊಳ್ಳುತ್ತದೆ. ಎಲ್ಲಿಗೆ ನಿಲ್ಲುತ್ತದೆನ್ನುವುದು ಪ್ರಶ್ನೆ.

ಅಧ್ಯಕ್ಷರು.--ಮಾನ್ಯ ಮೊಯಿಲಿಯವರೇ.

"Provided further that the Speaker may, if he is satisfied about the urgency of the matter, allow a question of privilege to be raised at any time during the course of a sitting "

ಅದನ್ನು ಬಿಟ್ಟುಬಿಡಿ. ನಾನು ಮೊದಲೇ ಹೇಳಿದ್ದೇನೆ. ನಿಮ್ಮದು ಟೈಮ್‌ನಲ್ಲಿ ಬರದಿದ್ದರೂ ಕೂಡ ನಾನು ನಿಮಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— " At any time immediately after the disposal of questions " . So, it should be raised immediately after the question hour not at any time.

Mr. SPEAKER.—I have allowed all the three members to raise.

SRI M. VEERAPPA MOILY.—That is a different matter. ನಾವು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದಾಗ ನಮಗೆ ತಾವು ನಿಯಮದಿಂದ ದಾರಿತಪ್ಪಿದ್ದೀರೆಂದು ಸೂಚನೆ ಕೊಡಬೇಕಾಗಿತ್ತು. ಇನ್ನು ಎರಡನೆಯದಾಗಿ ವಿಧಿ ಬಿಂದುವಿನಲ್ಲಿ ಸನ್ಮಾನ್ಯ ಶಾಸಕರಾದ ರತ್ನಾಕರ್‌ರವರು ಎತ್ತಿದಂಥ ಪ್ರಶ್ನೆ ಇಷ್ಟೇ. ವೆರಿ ಸ್ಮಾಲ್. ಏತಕ್ಕೆಂದರೆ it cannot be on the act. It should be on the substantial matter of privilege. ಈಗ ಏನಾಗಿದೆ ಎಂದರೆ, ಅಧ್ಯಕ್ಷರೇ ಅವರು ತಮ್ಮ ನೋಟೀಸ್‌ನ ಅಭಿಪ್ರಾಯವನ್ನು ಓದಿದ್ದಾರೆ. ಅದನ್ನು ಪಕ್ಷದ ಸಭೆಯಲ್ಲಿ ಮಾತನಾಡಿದ್ದಾರೆಂದು ಅವರು ಹೇಳಿವರೆ ಪಕ್ಷದ ಸಭೆಗೆ ಪತ್ರಿಕಾಕರ್ತರು ಹೋಗುವಂಥ ಪ್ರಶ್ನೆಯೇ ಇಲ್ಲ. ಪಕ್ಷದ ಮೀಟಿಂಗ್ ಎಂದರೆ ಇನ್‌ಕ್ಯಾಮರಾ ಮೀಟಿಂಗ್‌ನಲ್ಲಿ ಇಂಥ ವಿಷಯವನ್ನು ಹೇಳಿದರು ಎಂದು ಹೇಳಿ ಅದು ರಿಪೋರ್ಟ್ ಆಗಿದೆ ಅದು ಪೇಪರ್ಸ್‌ನಲ್ಲಿ ಬಂದಿದೆ. There should be some jurisdiction to this House to entertain the matter, When there is no jurisdiction in a matter ike this. it cannot be allowed tobe raised. Meeting was not open o the press, as per my information.

ಶ್ರೀ ಎ. ಲಕ್ಷ್ಮೀಸಾಗರ್.—ಒನ್ ಮಿನಿಟ್......

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರೇನಾದರೂ ಗೂಢಾಚಾರರನ್ನು ಕಳುಹಿಸಿ ಕೊಟ್ಟಿದ್ದರೆ ಹೇಗೆ ?

Sri M. VEERAPPA MOILY.—Now the cat is out of the bag. It is planted by you.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಮಾಡಬಾರದ ಪಾಪಮಾಡಿ, ಅಪಮಾನಮಾಡಿ ಈ ಸಭೆಗೆ ಬಂದಿದ್ದಾರೆ.

(ಗೊಂದಲ)

(INTERRUPTIONS)

Sri M. VEERAPPA MOILY.—Minister has xxx This is a case similar to Watergate. I think we can...

(INTERRUPTIONS)

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅಲ್ಲ. ನಾಚಿಕೆಯಾಗುವುದಿಲ್ಲ ನಿಮಗೆ...Are you oing to prove it ?...

(ಭಾರೀ ಗೊಂದಲ)

SRI A. LAKSHMI SAGAR.—No;

ಅಧ್ಯಕ್ಷರು.—ಬೇಗ ಮುಕ್ತಾಯ ಮಾಡಿ, ನೀವು ಸ್ವಲ್ಪ ಸಮಾಧಾನವಾಗಿ ಇರಿ.

x x x

ಅಧ್ಯಕ್ಷರು.—ಮುಕ್ತಾಯ ಮಾಡುತ್ತೀರೋ ಇಲ್ಲವೋ ? ಕೊನೆಗಳಿಗೆಯಲ್ಲಿ ಒಬ್ಬರಿಗೊಬ್ಬರಿಗೆ ಜಗಳ ಮಾಡಿಕೊಳ್ಳುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬಹಳ ಧನ್ಯವಾದಗಳು. ಅಧ್ಯಕ್ಷರೆ,......

(ಗೊಂದಲ)

SRI A. LAKSHMI SAGAR.—Are you not a shamed of it ?

ಅಧ್ಯಕ್ಷರು.— The word 'Spy' is not ingoodtsate. I have expunged it, ಯಾರೂ ಏನೂ ಅನ್ನುವುದು ಬೇಡ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಬಹಳ ಸಮಾಧಾನವಾಗಿ ಮಾತನಾಡುತ್ತಿದ್ದೇನೆ. I never got excited. ಏತಕ್ಕೆ ಅವರು ಎಕ್ಸೈಟ್ ಆಗಿದ್ದಾರೋ ಗೊತ್ತಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ಪ್ರೆಸ್‌ನಲ್ಲಿ ಬಂದಿದೆ ಎಂದು......

ಅಧ್ಯಕ್ಷರು.—ನೀವು ಅವರಿಗೆ ಹೇಳುವುದು ಬೇಡ, ಅವರು ನಿಮಗೆ ಹೇಳುವುದು ಬೇಡ.

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಎಕ್ಸೈಟ್‌ಮೆಂಟ್ ಅಲ್ಲವೆ ? Why should he call me a Spy ? This matter has come in a prestigeous Newspaper. You cannot call me a spy. I can also call you by another name. If you have got any guts, you deny the statement. Let me see. So far this Press statement has not been denied either by you or by the gentleman who made this statement. If you have any decorum and decency in public life and respect for democratic institutions you should have denied it. Shamelessly, you are arguing about it.

ಅಧ್ಯಕ್ಷರು.—ಅದೇನು ಗುಡ್ ಟೇಸ್ಟ್ ಅಲ್ಲ. ಎರಡನ್ನೂ ತೆಗೆದದ್ದು ಆಯಿತು. ಹತ್ತು ನಿಮಿಷದಲ್ಲಿ ಮುಗಿಯುತ್ತದೆ, ಮಾತನಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆದರೆ ಇವರು ಬಾಯಿಗೆ ಬಂದ ಹಾಗೆ ಮಾತನಾಡಿದರೆ... Can he say shameless...

SRI A. LAKSHMISAGAR.—It is Parliamentary...

ಅಧ್ಯಕ್ಷರು.—ನೀವೂ ಮಾತನಾಡಬೇಡಿ, ಅವರೂ ಮಾತನಾಡುವುದು ಬೇಡ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬಾಯಿಗೆ ಬಂದ ಹಾಗೆ ಮಾತನಾಡಿದರೆ... .....

ಅಧ್ಯಕ್ಷರು.—ನೀವೂ ಅನ್ನಬೇಡಿ, ಅವರೂ ಅನ್ನುವುದು ಬೇಡ. ನಾನು ಇಬ್ಬರಿಗೂ ಹೇಳಿದ್ದೇನೆ. ದಯಮಾಡಿಟ್ಟು ಇಬ್ಬರೂ ಗಂಭೀರವಾಗಿ ಮಾತನಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರೆಸ್ ರಿಪೋರ್ಟಿನ ಯಾವುದೋ ನಾಲ್ಕು ಹಾಳೆ ಕಿತ್ತುಕೊಂಡು........

(ಗೊಂದಲ)

SRI A. LAKSHMI SAGAR,—You cannot attribute motives to me. You argue, we will agree. But you cannot call me by name.. ..

(Intrruptions)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರೆಸ್‌ನಲ್ಲಿ ಬಂದಿದ್ದೆಲ್ಲವನ್ನೂ ಡಿನೈ ಮಾಡಬೇಕಾದರೆ ನಮಗೆ ಬೇರೆಏನೂ ಕೆಲಸ ಇಲ್ವಾ ?

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಪ್ರೆಸ್‌ನಲ್ಲಿ ಬಂದಿರುವುವನ್ನೆಲ್ಲಾ ಡಿನೈ ಮಾಡುತ್ತಾ ಕುಳಿತುಕೊಳ್ಳುವುದಕ್ಕೆ ನಮಗೆ ಬೇರೆ ಏನೂ ಕೆಲಸ ಇಲ್ಲವಾ ?

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಇವರು ಹೇಳಲಿ (ವೀರಪ್ಪ ಮೋಯಿಲಿ ಅವರು). ಮಧ್ಯದಲ್ಲಿ ಅವರು (ಲಕ್ಷ್ಮೀಸಾಗರ್ ಅವರು) ಏಳಬಾರದು ಎಂದು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಪ್ರೆಸ್‌ನಲ್ಲಿ ರಿಪೋರ್ಟ್ ಆಗಿದೆ, ಆದರೆ ಅದು ಪ್ರೈವೇಟಾಗಿತ್ತು, ಕ್ಲೋಸ್ ಡೋರ್ ಮೀಟಿಂಗ್ ಆಗಿತ್ತು ಎಂದು ಅವರು ಹೇಳಿದರು. ನಾನು ಹೇಳಿದೆ it was open to the press......ಎಂದು.

(ಶ್ರೀ ಪ್ರಭಾಕರ ರಾಣೆ ಅವರು ಮಾತನಾಡಲು ಎದ್ದರು)

ಶ್ರೀ ಎ. ಲಕ್ಷ್ಮೀಸಾಗರ್.—ರಾಣೆ ಅವರೇ ಕೇಳಿ. ಪ್ರೆಸ್‌ನವರಿಗೆ ಅವಕಾಶ ಇರಲಿಲ್ಲ, ಅದು ಪ್ರೈವೇಟ್ ಮೀಟಿಂಗ್, ಪಾರ್ಟಿ ಮೆಂಬರ್‌ಸ್‌ಗೆ ಮಾತ್ರ ಅವಕಾಶ ಇತ್ತು ಎಂದು ಹೇಳಿದ್ದರೆ ಸಾಕಾಗಿತ್ತಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರು ಹೇಳಿಕೊಟ್ಟ ಹಾಗೆ ಹೇಳಬೇಕಾ ? ಹಾಗಿದ್ದರೆ ಬರೆದುಕೊಟ್ಟುಬಿಡಿ.........

ಶ್ರೀ ಕೆ. ಹೆಚ್. ಪಾಟೀಲ್.— ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಒಂದು ನಿಮಿಷ ಮಾತ ನಾಡುತ್ತೇನೆ. ಇಬ್ಬರು ಸಿಟ್ಟಿನ ಭರದಲ್ಲಿ ಮಾತನಾಡಿ ಇಂಥ ಸಮಸ್ಯೆಯನ್ನು ತೆಗೆದುಕೊಳ್ಳುವುದು ಸರಿಯಲ್ಲ.ಅದಕ್ಕಾಗಿ ನೀವು ಸಭೆಯನ್ನು ಅಡ್ಜರ್ನ್ ಮಾಡಿ. ಅಥವಾ ಪೂರಾ ಮುಗಿಸಿಬಿಡಿ. ನನ್ನ ಮಾತು ನಂಬುವುದಾದರೆ ಲಕ್ಷ್ಮೀಸಾಗರ್ ಅವರಿಗೆ ಹೇಳುತ್ತೇನೆ, ಪ್ರೆಸ್‌ನವರಿಗೆ ಅಲ್ಲಿ ಅಲೋ ಇರಲಿಲ್ಲ. ನನ್ನ ಮಾತು ಲಕ್ಷ್ಮೀಸಾಗರ್ ಅವರು ನಂಬುವುದಾದರೆ.........

ಶ್ರೀ ಧರ್ಮಸಿಂಗ್.—ಅಷ್ಟು ಏತಕ್ಕೆ ಹೇಳುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್.—ನಾನು ಹೇಳುತ್ತೇನೆ. ನನ್ನ ಮಾತು ನಂಬುವುದಾದರೆ ನಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ಪ್ರೆಸ್‌ನವರಿಗೆ ಅಲೋ ಇರಲಿಲ್ಲ. ಆದರೆ ಯಾವುದೋ ಒಂದು ಸೋರ್ಸ್ ನಿಂದ ಬರೆದಿದ್ದರೆ ಪತ್ರಿಕೆಯವರನ್ನು ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಇಂತ ಸದನಕ್ಕೆ ಬರುವಾಗ ನಿಶ್ಚಿತವಾದ ಎವಿಡೆನ್ಸ್ ತೆಗೆದುಕೊಂಡು ಬರಬೇಕು. ಅವರು ಪತ್ರಿಕೆಯಲ್ಲಿ ಬಂದಿರುವು ದನ್ನು ತಂದಿದ್ದಾರೆ. ಇವತ್ತು ಹೇಳುತ್ತಿದ್ದೇನೆ, ಏನೆಂದರೆ, ಒಂದು ಪಕ್ಷದ ಅಧ್ಯಕ್ಷರನ್ನು, ಅದೂ ಕೇಂದ್ರ ಸರ್ಕಾರದ ಮಂತ್ರಿಗಳನ್ನು, ಮಾನನೀಯವಾದಂಥ ಸದಸ್ಯರನ್ನು ಈ ರೀತಿಯಾಗಿ ತ್ವರಿತವಾಗಿ ಪತ್ರಿಕೆಯಲ್ಲಿ ಪ್ರಕಟಣೆ ಬಂದಿದ್ದಕ್ಕಾಗಿ ತಡೆದು ನಿಲ್ಲಿಸುತ್ತೇವೆ ಎಂದು ಹೇಳುವುದು ಸರಿಯಾದುದಲ್ಲ. ಈ ಸಂಪ್ರದಾಯವನ್ನು ನಾವು ಹಾಕಿಕೊಂಡರೆ ಈ ಸದನ ಪ್ರತಿದಿನ ೧೦೦ ಪ್ರಿವಿಲೇಜ್ ಮೋಷನನ್ನು ಅಕ್ಸೆಪ್ಟ್ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ತಾವೇ ಮೊನ್ನೆ ಒಂದು ನಿಯಮನ್ನು ಹೇಳಿದ್ದೀರಿ. ಪತ್ರಿಕೆಗಳಲ್ಲಿ ವರದಿ ಆಗಿದ್ದರ ಬಗ್ಗೆ ಯಾವುದಾದರೂ ಸಮಸ್ಯೆ ಬಂದರೆ ಅಲ್ಲಿ ಬೈಯ್ದಾಡಿದ್ದನ್ನು ಈ ಸದನದಲ್ಲಿ ತರಬಾರದು ಅದು ಪ್ರಿವಿಲೈಜ್ ಆಗುವುದಿಲ್ಲ ಎಂದು ಡಿಸಿಷನ್ ಓದಿ ಹೇಳಿದಿರಿ.

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೇ.........

ಶ್ರೀ ಎ. ಲಕ್ಷ್ಮೀಸಾಗರ್.—ಯಾಕೀ ಕೂಗಾಡ್ತೀರಿ ? ಮಾತನಾಡೋಣ. ಕೂಗಾಡುವುದರಿಂದ ಏನೂ ಸಮಸ್ಯೆ ಬಗೆಹರಿಯುವುದಿಲ್ಲ. ಶಬ್ದಬಾಹುಳ್ಯ ದಿಂದ ಏನೂ ಆಗುವುದಿಲ್ಲ ರಾಮಯ್ಯನವರೇ ? ಇದೆಲ್ಲಾ ಬೇಳೆಕಾಳು ಬೇಯುವುದಿಲ್ಲ. ದಯಮಾಡಿ ನ್ಯಾಯಕ್ಕೆ, ನೀತಿಗೆ ತಲೆಬಾಗುವುದನ್ನು ಕಲಿಯಿರಿ. ಅದನ್ನು ಬಿಟ್ಟು ಕೈ ಯಾತಕ್ಕೆ ಎತ್ತುತ್ತೀರಿ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್ —ಆ ದೃಷ್ಟಿಯಿಂದ ತಮಗೆ ಪುನಃ ಮನವಿ ಮಾಡುತ್ತೇನೆ, ಇದು ಸರಿಯಲ್ಲ. ಸಿಟ್ಟಿನ ಭರದಲ್ಲಿ ಪತ್ರಿಕೆಯಲ್ಲಿ ಬಂದಿದ್ದಕ್ಕೆ ಒಬ್ಬ ಕೇಂದ್ರ ಸರ್ಕಾರದ ಮಂತ್ರಿ ಬಗ್ಗೆ ತಾವು ಈ ರೀತಿ ಹೇಳಬಾರದು.

ಶ್ರೀ ಎಂ. ರಘುಪತಿ.—ಪಕ್ಷದ ಒಳಗಡೆ ಏನು ಬೇಕಾದರೂ ಮಾತನಾಡಿಕೊಳ್ಳಲಿ. ಪಕ್ಷದ ಬಗ್ಗೆ ಮಾತನಾಡಿದ್ದು ಇಲ್ಲಿ ಬರಲಿಲ್ಲ ಸದನದ ಬಗ್ಗೆ ಮಾತನಾಡಿದ್ದರಿಂದ ಬಂತು. ಇಲ್ಲದಿದ್ದರೆ ಬರುವುದಕ್ಕೆ ಅವಕಾಶವೇ ಇರಲಿಲ್ಲ.

ಅಧ್ಯಕ್ಷರು.—ನಾನಿನ್ನೂ ಪರ್ಮಿಷನ್ ಕೊಟ್ಟಿಲ್ಲ. ಡೀಟೈಲ್ಸ್‌ಗೆ ಹೋಗಬೇಡಿ. Whether I should reject it or whether I should refer it to the Committee of privileges, I have to still examine.

ಶ್ರೀ ಧರ್ಮಸಿಂಗ್.—ನಮ್ಮ ಪಕ್ಷದ ಅಧ್ಯಕ್ಷರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ ಎಂದು ಲ್ಮೀಸಾಗರ್ ಅವರ ು ಹೇಳುತ್ತಿದ್ದಾರೆ. ಈಗಾಗಲೇ ನಮ್ಮ ಕೆ. ಹೆಚ್. ಪಾಟೀಲರು ಹೇಳಿದಹಾಗೆ

ಅವರು ಕೇಂದ್ರದ ಮಂತ್ರಿಗಳಾಗಿದ್ದಾರೆ. ನಮ್ಮ ಪಕ್ಷದ ಅಧ್ಯಕ್ಷರಾಗಿ ಕೆಲಸ ಕಾರ್ಯ ಮಾಡುತ್ತಿದ್ದಾರೆ. ಇವತ್ತು ಪತ್ರಿಕೆಯಲ್ಲಿ ಬಂದಿರುವುದನ್ನು ಆಧಾರವಾಗಿಟ್ಟುಕೊಂಡು ಇವತ್ತಿನದಿವಸ ಹಕ್ಕುಚ್ಯುತಿ ನಿರ್ಣಯ ತರುತ್ತಿದ್ದಾರೆ. ಮೊನ್ನೆ ಕೂಡ ನಮ್ಮ ನಾಯಕಿಯವರು ಮತ್ತು ಖಾರ್ಗೆಯವರು ನಿಲುವಳಿ ಸೂಚನೆಯನ್ನು ತಂದಾಗ ನಿಮ್ಮ ಮೇಲೆ ಕೂಡ ಪತ್ರಿಕೆಯಲ್ಲಿ ಬಂದಿದೆ, ನೀವು ಕೂಡ ರೇವಜೀತು ಇದರಲ್ಲಿ ಇನ್‌ವಾಲ್ವ್ ಆಗಿದ್ದೀರಿ, ಎನ್ನುವ ಮಾತನ್ನು ಹೇಳಿದೆ ಅದು ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದೆ. ಅದು ಹೈಕೋರ್ಟಿನಲ್ಲಿದೆ ಎಂದು ನಾನೂ ಕೂಡ ಹೇಳಿದ್ದೆ. ಆಗ ಏನು ಹೇಳಿದ್ದಾರೆ ಎಂಬುದನ್ನು ಕಡತ ತೆಗೆದು ತೋರಿಸಬಹುದು. ಪತ್ರಿಕೆಯಲ್ಲಿ ಬಂದಿದ್ದೆಲ್ಲಾ ಅದು ಪೂರ್ಣವಾಗಿ ನಿಜ ಆಗುವುದಿಲ್ಲವೆಂದು ಮತ್ತು ಅದನ್ನು ತಳ್ಳಿಹಾಕಬಹುದು ಎಂಬುದಾಗಿ ಈ ಸದನದಲ್ಲಿ ಹೇಳಿದ್ದಾರೆ. ಇವತ್ತು ಕೊನೆ ಘಳಿಗೆಯವರೆಗೆ ನಮ್ಮ ಪಕ್ಷದ ಅಧ್ಯಕ್ಷರ ಮೇಲೆ ಪೊಲಿಟಿಕಲ್ ವೆಂಡೆಟ್ಟಾ ಅಂದರೆ ಬೇಕೂ ಅಂತ ಹೇಳಿ ಅವರಮೇಲೆ ಆಪಾದನೆ ಮಾಡುವುದಕ್ಕೆ ಜನತಾ ಪಕ್ಷದ ಪರವಾಗಿ, ಸರ್ಕಾರದ ಪರವಾಗಿ ಶ್ರೀಮಾನ್ ಲಕ್ಷ್ಮಿಸಾಗರ್‌ರವರು ಪತ್ರಿಕೆಯಲ್ಲಿ ಏನು ಬಂದಿದೆ ಅದರ ಆಧಾರದ ಮೇಲೆ ಈರೀತಿ ಮಾಡುವಂಥದ್ದು ತಪ್ಪು, ತಾವು ಇದಕ್ಕೆ ಅನುಮತಿ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ವಿಧಿ ಬಿಂದು ನಮ್ಮ ಪಟವಾಕ್ಕಿ ರತ್ನಾಕರ್ ಏನು ಎತ್ತಿದ್ದಾರೆ, ಆ ವಿಧಿ ಬಿಂದುವಿನಲ್ಲೇ ನಾವು ಇದ್ದೇವೆ. ಈಗ ಸನ್ಮಾನ್ಯ ಸಚಿವರ ಬಗ್ಗೆ ಆ ರಿಮಾರ್ಕ್ಸ್ ಏಕೆ ಬಂತು ಅಂದರೆ ಆ ಪತ್ರಿಕೆಯನ್ನು ನಾನೂ ಕೂಡ ತರಿಸಿ ನೋಡಿದ್ದೇನೆ. ಇದರಲ್ಲಿ ಆ ಸಭೆಗೆ ಪತ್ರಿಕೆಯವರಿಗೆ ಅವಕಾಶವಿತ್ತು ಎಂದು ಎಲ್ಲೂ ಪತ್ರಿಕೆಯಲ್ಲಿ ಬರಲಿಲ್ಲ. ಆದ್ದರಿಂದ ಇದು ತಮ್ಮ ಸ್ವಂತ ಅಭಿಪ್ರಾಯ ವಿದ್ದರೂ it is your own import. ಮಿನಿಸ್ಟರ್ ಆದ ತಮಗೆ ಇನ್‌ಫರ್‌ಮೇಷನ್ ಎಲ್ಲಿಂದ ಬರುತ್ತದೆ ? Either through the paper or through your own agencies like CID, C. O. D. or intelligence. ಅಲ್ಲವೇ ? ಪ್ರಶ್ನೆ ಏನೆಂದರೆ, ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲರು ಏನು ಹೇಳಿದರು ಅದು ಸರಿಯಾಗಿದೆ. ಅವರು ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು. ಎರಡನೆಯದಾಗಿ ಅವರು ಕೇಂದ್ರ ಸರ್ಕಾರದ ಸನ್ಮಾನ್ಯ ಸಚಿವರೂ ಕೂಡ ಹೌದು. ಅವರು ಏನು ಹೇಳಿದ್ದಾರೆಂದರೆ ಅದೊಂದು ಇನ್ ಕ್ಯಾಮರಾ ಮಿಟಿಂಗ್. ಆದರೆ ಸನ್ಮಾನ್ಯ ಲಕ್ಷ್ಮೀಸಾಗರ್ ಅವರು ಅದೆಲ್ಲಾ ಓಪನ್ ಆಗಿದೆ ಎನ್ನುವ ಮಾತನ್ನು ಹೇಳಿದರು. ಅದು ಏನು ಅರ್ಥವಾಗುತ್ತದೆ ? The Ministers of the Central Government are watched by the State Government. ಅಂತ ಆಗುವುದಿಲ್ಲವೇ ? I may not call him a spy, but it leads to that. ಸ್ಪೈ ಅಂತ ಹೇಳುವುದು ಬೇಕಾಗಿಲ್ಲ. That means the movements are watched. ಇದಕ್ಕೆ ಏನು ಅರ್ಥ ಬರುತ್ತದೆ ? This may be a subject matter for privilege motion in the Parliament. Ultimately it may be taken to a serious dimension. ವಾಟರ್‌ಗೇಟ್ ಪ್ರಕರಣವನ್ನು ನಾನು ಉದಾಹರಣೆಯಾಗಿ ಕೊಟ್ಟೆ. That is not allowed at all.

ಅಧ್ಯಕ್ಷರು.—ಪತ್ರಿಕೆಯಲ್ಲಿ ಬಂದಿದ್ದನ್ನು ಎತ್ತಿ ತೋರಿಸಿ ಅದು ಪ್ರಿವಿಲೇಜ್ ಮೋಷನ್ ಆಗುತ್ತದೆ ಎಂಬುದಾಗಿ ಹೇಳಿದ್ದಾರೆ. ಏನಾದರು ಇದ್ದರೆ ಅದರ ಬಗ್ಗೆ ತಾವು ಹೇಳಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ತಮಗೆ ಮನವರಿಕೆ ಮಾಡಿಕೊಳ್ಳುವುದು ಇಷ್ಟೆ. ಇದರಲ್ಲಿ ಏನಾಗಿದೆ ಎಂದರೆ "State Assembly Business: Pujary tells Party legislators" ಅಂತ ಹೇಳಿರತಕ್ಕಂತಹದ್ದು. ಅವರದೇ ಆದ ಸ್ವಂತ ಪಾರ್ಟಿ ಮಿಟಿಂಗ್‌ನಲ್ಲಿ ಇದನ್ನು ಹೇಳಿದ್ದಾರೆಂದು ಇವರು ಹೇಳಿದ್ದಾರೆ. ಈಗ ಇಲ್ಲಿ ಏನಾಗಿದೆ ಎಂದರೆ, ಯಾರಾದರೂ ಇದನ್ನು ಸ್ಪ್ರಾಲ್ ಮಾಡತಕ್ಕಂತಹದ್ದು ಇದೆಯೇ ? Whether anything has happened here ? ನಮ್ಮ ಪಾರ್ಟಿ ಅಧ್ಯಕ್ಷರು ಅಂತಹ ಆದೇಶವನ್ನು ನಮಗೆ ಕೊಟ್ಟಿದ್ದಿದ್ದರೆ yes, it is our bounden duty to obey and we would have done it. But we have not done. It means he has not said it. One need not clarify all the press statements. ಯಾವ ಕಾಂಟೆಸ್ಟ್‌ನಲ್ಲಿ ಹೇಳಿದ್ದಾರೆ ? ಏನ. ಹೇಳಿದ್ದಾರೆ ? ಅದು ಏನು ವಿಚಾರ ಇದೆ ಎಂಬುದು ನಿಮಗೂ ಗೊತ್ತಿಲ್ಲ, ತಮಗೂ ಗೊತ್ತಿಲ್ಲ

ಗೊತ್ತಿಲ್ಲದ ವಿಚಾರದಲ್ಲಿ ಜಡ್ಜ್‌ಮೆಂಟ್ ಹೇಗೆ ಕೊಡುತ್ತೀರಿ ? ಏಕೆಂದರೆ ಇದನ್ನು ರೈಸ್ ಮಾಡಿದ ಮೇಲೆ ತಾವು ತಮ್ಮ ಕನ್ಸೆಂಟ್ ಕೊಡುವುದಕ್ಕೆ ಮೊದಲು you will have to satisfy yourself. What is the material here except some reports from the press which we say that the meeting was incamera and when nothing happened here to stall the proceedings ? ಅವರು ಆ ರೀತಿಯ ಸೂಚನೆಯನ್ನು ಕೊಟ್ಟಿದ್ದರೆ, ಇಲ್ಲಿ ಏನಾದರೂ ಘಟನೆಗಳು ನಡೆಯಬೇಕಾಗಿತ್ತು. ಆದರೆ ಆ ರೀತಿಯ ಯಾವುದೇ ಘಟನೆಗಳು ಕೂಡ ನಡೆಯಲಿಲ್ಲ. In the absence of all this evidence, how do they get jurisdiction to move that privilege motion ? ಕಾನೂನು ವಿಚಾರ ಕೂಡ ಬರುತ್ತದೆ. ಅದು ಇದರಲ್ಲಿ ಬರುವುದಿಲ್ಲ. ಏಕೆಂದರೆ ಆ ವರದಿ Even take Kaul & Shakdhar. On page 224 :

"Examples of speeches and writings which have been held to constitute a breach of privilege, contempt of house may be categorised as under :

"Reflection on the House."

Whether a call for stalling is a reflection on the House ? Even if it is admitted for argument's sake that it is a statement which is true and which we don't admit, where is the reflection on the House ? ಏನು ರಿಫ್ಲೆಕ್ಷನ್ ಆಗುತ್ತದೆ ? Next. "Reflection on the character and impartiality of the Speaker in the discharge, of duties" ತಮ್ಮ ಮೇಲೆ ಏನು ರಿಫ್ಲೆಕ್ಷನ್ ಪಾಸ್ ಮಾಡಿದ್ದಾರೆ ಈ ಹೇಳಿಕೆ ಪ್ರಕಾರ. 'Reflections on the Members and the execution of their duties". Is there any reflection made on the Members' speech saying that this is a thing which is not proper ? ಎಂದು ಏನಾದರೂ ಹೇಳಿಕೆ ಕೊಟ್ಟಿದ್ದಾರಾ ? "Reflection on a member serving on a Committee of the House" ಎಂದು ಮಾಡಿದ್ದೀರಾ ? "Reflection on the Chairman of the Committee of the House". These are the substancial illustrative cases where the privilege it attracted. ಇಲ್ಲಿ ಒಂದು ಇಷ್ಯೂ ಮೇಲೆ ನೀವು stall ಮಾಡಿ ವಿಧಾನ ಸಭೆಯನ್ನೇ ನಡೆಸಬೇಡಿ ಎಂದು ಪಾರ್ಟಿಯವರಿಗೆ ಹೇಳಿದಮೇಲೆ even for argument's sake, how does it constitute ? They don't get a jurisdiction to move a privilege motion. ಇದು ಅಟ್ರ್ಯಾಕ್ಟ್ ಆಗುವುದಿಲ್ಲ. It can never attract that. ನಾವೂ ಕೂಡ ಇಲ್ಲಿ ೭೨ನೇ ಇಸವಿಯಿಂದ ಇದ್ದೇವೆ. Statements are given. ಗೋಪಾಲಗೌಡರು ಹೊರಗಡೆಯಿಂದ ಸ್ಟೇಟ್‌ಮೆಂಟ್ ಕೊಟ್ಟಿದ್ದ ಒಂದು ಪ್ರಸಂಗ ಇತ್ತು. That never constituted at any time.

ಅಧ್ಯಕ್ಷರು.—ತಾವು ವಿಷಯಕ್ಕೆ ಹೋಗಬೇಡಿ. ನಾನು ಅದಕ್ಕೆ ಅಲೋ ಮಾಡಿಲ್ಲ.

SRI M. VEERAPPA MOILY.—When there is no substance at all, and when they have no jurisdiction to move a privilege motion of this kind, what should we say ? Are we not to say that it is politicaly motivated at the fag end of the Session ? ಅವರ ಒಳಗೆ ಏನೇನೋ ಇದೆ ಎಂದು ಇದನ್ನು ಮರೆಮಾಚುವುದಕ್ಕೆ politically motivated ಸ್ಟೇಟ್‌ಮೆಂಟ್ ಏಕೆ ? Can we not attribute motive of this kind ? ಈ ಬಗ್ಗೆ ಕೌಲ್ ಅಂಡ್ ಶಕ್ದರ್‌ನಲ್ಲಿ ಏನಿದೆ ಎಂಬುದರ ಬಗ್ಗೆ ನಾನು ಎಲ್ಲವನ್ನೂ ಓದಿದ್ದೇನೆ.

ಶ್ರೀ ರಮೇಶ್‌ಕುಮಾರ್.—ಕೌಲ್ ಅಂಡ್ ಶಕ್ದರ್‌ನ ಪುಟ ೧೯೯ನ್ನು ಸ್ವಲ್ಪ ಓದಿ.

SRI M. VEERAPPA MOILY.—We must approach this question in a positive way and not in a negative way. ಇಂತಹ stall ಮಾಡಿದ ಪ್ರಸಂಗ ಇಲ್ಲದಿದ್ದರೂ ಈಗ ಪಾಸಿಟಿವ್ ಸ್ಟೇಟ್‌ಮೆಂಟ್ ಮಾಡಿದ ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆಯೇ ? Stall ಮಾಡುವುದಕ್ಕೆ ಕೊಟ್ಟ threat ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆಂದು ಹೇಳಿದೆಯೇ ? ಯಾವ ಪುಸ್ತಕದಲ್ಲೂ ಕೂಡ ಯಾವ authority ಕೂಡ it does not support their plea. ಅದನ್ನು ಏಕೆ ಹೊಸದಾಗಿ ಕ್ರಿಯೇಟ್ ಮಾಡಬೇಕು ಅಧ್ಯಕ್ಷರೇ ? It is a statement which is made incemera in a Party meeting. ತಮಗೆ ಗೊತ್ತಿದೆ ಈವನ್ Para 2 of 224 again which was read out by the Hon.Minister for Parliamentary Affairs on the other day ; ಅದರಲ್ಲಿ ಏನು ಹೇಳಿದ್ದಾರೆಂದರೆ

> "On a similar consideration in a case of Lok Sabha where one political leader was reported in a newspaper to have said in a public speech that the representatives of a political party in the Legislature were people whom any First Class Magistrate would round up and were men without any appreciable means of livelihood, Speaker Aiyangar disallowed the question of privilege."

ಇಂತಿಷ್ಟು statement ಪತ್ರಿಕೆಯಲ್ಲಿ ಬಂದರೆ ಅದನ್ನೆಲ್ಲಾ sacrosanct ಮಾಡಿ ಪ್ರಿವಿಲೇಜ್ ಆಗುತ್ತದೆಂದು ಹೇಳಿದ್ದು, ಇದು ಯಾವಾಗಲೂ ಕೂಡ it is not based upon any authority. It is not based upon any precedents of Parliamentary procedure either in the Common wealth countries or in our country. ಈ ರೀತಿ ಯಾವ ಸ್ಟೇಟ್‌ನಲ್ಲೂ ಆಗಿಲ್ಲ. ಆದರೆ ಈಗ ಮಂತ್ರಿ ಪಾರ್ಲಿಮೆಂಟರಿ ಸಚಿವರು ಏನು ಹೇಳುತ್ತಾರೆ ? We must have a negative approach. ಇದು ಇಲ್ಲದೇ ಇದ್ದಾಗ, ಇದು ನಾವು ಮಾಡಬೇಕು ಎಂದು ಹೇಳಿ. ತಾವು ಅಧ್ಯಕ್ಷರೇ, ತಮ್ಮ ಬಾಯಿಂದ ಅಥವಾ ತಮ್ಮ ಕೈಯಿಂದ ಈ ಕೆಲಸವನ್ನು ಮಾಡಿಸತಕ್ಕಂತಹ ಒಂದು ರೆಸ್ಪಾಂಸಿಬಿಲಿಟಿ......

ಅಧ್ಯಕ್ಷರು.— ನಾನು ಆಗಲೇ ಹೇಳಿದ್ದೇನೆ. Don't assume and presume things. Don't think I have come to a conclusion.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ರೀತಿ ಚಿತಾವಣೆ, ಈ ಸರ್ಕಾರದವರು... ಬೇರೆ ಬೇರೆ ಚಿತಾವಣೆ ಮಾಡಿದ್ದಾರೆ ಇವರಮೇಲೆ. ಆದರೆ ಇಲ್ಲಿಯವರೆಗೆ ಬರಲಿಲ್ಲ. corridors of the Assembly ಯವರೆಗೆ ಬಂದಿರಲಿಲ್ಲ. ಈ ಚಿತಾವಣೆಗಳು, ಅಧ್ಯಕ್ಷರಮೇಲೆ. ಈಗ ಒಳಗಡೆಯಿಂದ ಚಿತಾವಣೆಗಳನ್ನು ಪ್ರಾರಂಭ ಮಾಡಿಕೊಂಡು ಹೊಸ ಸಂಪ್ರದಾಯ......

ಅಧ್ಯಕ್ಷರು.—ಮೊಯ್ಲಿಯವರೇ ನೀವು ಏನು ಮಾತನಾಡುತ್ತಿದ್ದೀರಿ ? ಎಲ್ಲಿ ನಿಂತು ಮಾತನಾಡುತ್ತಿದ್ದೀರಿ ? (ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಇಲ್ಲ ಅವರಿಗೆ. ನೋ, ನೋ, ನೆವರ್...ಸರ್ಕಾರದ ಮೇಲೆ ಹೇಳಿದ್ದು. ನಿಮ್ಮ ಮೇಲೆ ಅಲ್ಲ.

ಅಧ್ಯಕ್ಷರು.— ನೋಡಿ ನೀವು ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕು.

೨.೦೦ ಪಿ.ಎಂ.

ನಾನು ಅಷ್ಟು ದಡ್ಡ ಅಲ್ಲ. ನಾನು ಬಿ. ಎ. ಎಲ್. ಎಲ್. ಬಿ. ಕಲಿತು ವಕೀಲಿಕಿ ಮಾಡಿ ಮಂತ್ರಿಯಾಗಿ, ಎಂ. ಎಲ್. ಎ. ಆಗಿ ಇಲ್ಲಿಗೆ ಬಂದಿದ್ದೇನೆ. ನಿಮ್ಮ ಮಾತು ಕೇಳಲಿಕ್ಕೆ ತಯಾರಿಲ್ಲ. ಅವರ ಮಾತು ಕೇಳಲಿಕ್ಕೆ ತಯಾರಿಲ್ಲ. ಯೋಗ್ಯ ಇತ್ತೆಂದರೆ ಬೀದಿ ಭಿಕಾರಿ ಹೇಳಿದರೂ ಕೇಳುತ್ತೇನೆ. ನೀವೆಲ್ಲಾ ಮಾನ್ಯ ಸದಸ್ಯರು ಈ ಮನೆಯೊಳಗೆ ಏನು ಹೇಳಿದರೂ ಅದು ಯೋಗ್ಯ ಇತ್ತೆಂದರೆ ಅವರು ಹೇಳಿದರೂ ಕೇಳುತ್ತೇನೆ. ನೀವು ಹೇಳಿದರೂ ಕೇಳುತ್ತೇನೆ, ಅಯೋಗ್ಯವಿದ್ದರೆ ಅವರು ಹೇಳಿದರೂ ಕೇಳುವುದಿಲ್ಲ, ನೀವೂ ಹೇಳಿದರೂ ಕೇಳುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ನಮ್ಮ ಮಾತನ್ನು ಕೇಳಲಿಲ್ಲ.

ಅಧ್ಯಕ್ಷರು.—ನೋಡಿ, ಅವರು ಬೇಕಾದ್ದು ಹೇಳಲಿ, ನೀವು ಬೇಕಾದ್ದು ಹೇಳಿ ಅವನ್ನೆಲ್ಲಾ ನಾನು ಕೇಳುವುದಕ್ಕೆ ತಯಾರಾಗಿಲ್ಲ. ಅವರು ಹೇಳಿದರೂ ಕೇಳುವುದಿಲ್ಲ, ನೀವು ಹೇಳಿದರೂ ಕೇಳುವುದಿಲ್ಲ. ಯೋಗ್ಯ ಇತ್ತೆಂದರೆ ಯಾವ ಸದಸ್ಯರುಹೇಳಿದರೂ ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅವರ ಇತಿಹಾಸ ನಾನು ಹೇಳಿದ್ದೇನೆ.

ಅಧ್ಯಕ್ಷರು.—ಹಳ್ಳಿಗಳಲ್ಲಿ ಜನ ಹೇಳಿದರೆ, ತಾಲ್ಲೂಕುಗಳಲ್ಲಿ ಅಧಿಕಾರಿಗಳು ಹೇಳಿದರೆ, ನಾನು ಏನು ಹೇಳುತ್ತಿದ್ದೇನೆಂದರೆ, ಯಾವುದು ಯೋಗ್ಯವಿದೆ ಅದನ್ನು ಬೀದಿ ಭಿಕಾರಿ ಹೇಳಿದರೂ ಕೇಳಬೇಕು. ಆಯೋಗ್ಯವಿದ್ದರೆ ಮಂತ್ರಿಗಳು ಹೇಳಿದನ್ನು ಕೇಳಬಾರದು, ಎಂ. ಎಲ್. ಎ. ಗಳು ಹೇಳಿದರೂ ಕೇಳ ಬಾರದು, ಅಯೋಗ್ಯದ ಮಾತನ್ನು ಯಾರೇ ಹೇಳಿದರೂ ಕೇಳಬಾರದು. ಇಡೀ ರಾಜ್ಯದಲ್ಲಿ ಈ ಮಾತನ್ನು ಅಧಿಕಾರಿಗಳಿಗೆ ಸಹಿತ ಕೇಳುತ್ತಿದ್ದೇನೆ. ಯೋಗ್ಯವಿದ್ದರೆ ಕೇಳೇ ಕೇಳುತ್ತೇನೆ, ಅಯೋಗ್ಯ ವಿದ್ದರೆ ಕೇಳುವುದಿಲ್ಲ. ಮೊಯಿಲಿಯವರೇ, ನನ್ನ ಜೀವನದಲ್ಲಿ ಅಯೋಗ್ಯವಿದ್ದರೆ ಹರಿಬ್ರಹ್ಮ ಬಂದು ಹೇಳಿದರೂ ಕೇಳುವುದಿಲ್ಲ. ಅದನ್ನು ಬಿಟ್ಟು ನಿಮ್ಮ ಕೈಯಿಂದ ಮಾಡಿಸುತ್ತಿದ್ದಾರೆ ಹಾಗೆ ಹೀಗೆ ಎಂದು ಮಾತನಾಡಿದರೆ ಏನ್ರಿ ಇದೆಲ್ಲಾ ? You please conclude.

ಶ್ರೀ ಧರ್ಮಸಿಂಗ್.—ನಿಮ್ಮ ಬಗ್ಗೆ ಯಾರು ಮಾತನಾಡಿದರು.

ಅಧ್ಯಕ್ಷರು.—ನಾನು ಈ ಜಾಗಕ್ಕೆ ಎಂ.ಎಲ್.ಎ. ಆಗಿ ಕೆಲಸಮಾಡಿ ಮಂತ್ರಿಯಾಗಿ ಬಂದಿದ್ದೇನೆ. ತಾವು ದಯುವಿಟ್ಟು ಕನ್‌ಕ್ಲುಡ್ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ತಮ್ಮಮೇಲೆ ರಿಫ್ಲೆಕ್ಷನ್ ಮಾಡತಕ್ಕದನ್ನು ನಾನು ಕನಸಿನಲ್ಲಿಯೂ ನೆನಸಿಲ್ಲ, ಅದರ ಅಗತ್ಯವಿಲ್ಲ, ಅದನ್ನು ನಾನು ಮಾಡುವುದಿಲ್ಲ. ತಮ್ಮ ಪ್ರಾಮಾಣಿಕತೆ ಬಗ್ಗೆ ನಮಗೆ ಗೊತ್ತಿದೆ ತಾವು ಸದಸ್ಯರ ಹಕ್ಕನ್ನು ಸಂರಕ್ಷಣೆ ಮಾಡುವಬಗ್ಗೆ ನಿಮ್ಮ ಕಾಳಜಿಯುಬಗ್ಗೆ ಒಂದು ಪ್ರಶ್ನೆಯನ್ನು ಸಹ ನಾವು ಎತ್ತುವುದಿಲ್ಲ, ಮುಂದೆ ಸಹ ಎತ್ತುವುದಿಲ್ಲ. There is on question about it. We have full faith in you.

ಅಧ್ಯಕ್ಷರು,—ನೀವು ಅಂದ್ರಿ ಅದಕ್ಕೆ ನಾನು ಹೇಳಿದ್ದು.

ಶ್ರೀ ಎಂ. ವೀರಪ್ಪಮೊಯಿಲಿ.—ನಿಮ್ಮನ್ನು ಚಿತಾವಣೆ ಮಾಡತಕ್ಕ ಪೊಟೆನ್ಸಿಯಾಲಿಟಿ ಅವರಲ್ಲಿ ಬಹಳ ಇದೆ. We must be aware of it. ಅದು ತಮಗೂ ಅನ್ವಯಿಸುವುದಿಲ್ಲ, ನಮಗೂ ಅನ್ವಯಿಸುವುದಿಲ್ಲ.ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದನ್ನು ತಾವು ಎತ್ತಿ ಹಿಡಯು ಬೇಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ಕೈಯಲ್ಲಿ ಮಾಡಿಸುತ್ತಾರೆಂದು ಏನು ಹೇಳಿದ್ದೀರಿ, ಅದು ರೆಕಾರ್ಡ್ ಆಗಿದ್ದರೆ.......

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಹೇಳಲೇ ಇಲ್ಲ. I am sorry...

ಅಧ್ಯಕ್ಷರು.—ಅದು ರೆಕಾರ್ಡ್ ಆಗಿದ್ದರೆ I will expunge it.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಹೇಳಿಲ್ಲ, ಅದನ್ನು ಎಕ್ಸ್‌ಪಂಜ್ ಮಾಡಿದರೆ ಹೇಗೆ ? ನನ್ನ ಇತಿಹಾಸ ನೋಡಿ, ನಾನು ನೂರು ಸಾರಿ ಆಲೋಚನೆ ಮಾಡಿ ಹೇಳುತ್ತೇನೆ. ಎಕ್ಸ್‌ಪಂಜ್ ಮಾಡದರೆ ಹೇಗೆ ?

ಅಧ್ಯಕ್ಷರು.—ಅದು ಇದ್ದಿದ್ದರೆ ಎಕ್ಸ್‌ಪಂಜ್ ಮಾಡಲಾಗುವುದು.

ಶ್ರೀ ಎಂ. ವೀರಪ್ಪಮೊಯಿಲಿ.—Even if a single expunction point is there, I will leave this House, I will never reflect, ಇದನ್ನು ಬಹಳ ಸರಳವಾಗಿ ತೆಗೆದುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಒಂದು ನಿಮಿಷ ಈಲ್ಡ್ ಆಗುವುದಾದರೆ. ಮಾನ

ಮೊಯಿಲಿಯವರು ಹೇಳಿದರು, ನಮ್ಮ ಚಿತಾವಣೆಯಿಂದ ಮಾಡಿಸುತ್ತಿದ್ದಾರೆಂದು ಎಂದು ಹೇಳಿದ್ದಾರೆ. ಅದನ್ನು ರೆಕಾರ್ಡ್‌ನಿಂದ ತೆಗೆದುಹಾಕಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಹೇಳಲೇ ಇಲ್ಲ. I have never uttered.

ಅಧ್ಯಕ್ಷರು.—ಹೇಳಿದ್ದರೆ ತೆಗೆದು ಹಾಕಿಸುತ್ತೇನೆ, ಇಲ್ಲದಿದ್ದರೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಹೇಳಿದ್ದು ಏನೆಂದರೆ, ಈ ಕೆಲಸವನ್ನು ಅವರು ಏತಕ್ಕೆ ಮಾಡುತ್ತಿದ್ದರೆಂದು. I have never uttered it. ಇದನ್ನು ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಕೈಯಿಂದ ಮಾಡಿಸುತ್ತಾರೆನ್ನುವ ಮಾತನು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ವೀರಪ್ಪಮೊಯಿಲಿಯವರೇ ನೀವು ಇಲ್ಲವೆಂದು ಹೇಳುತ್ತೀರಿ, ಅವರು ನಿಮ್ಮ ಕೈಯಿಂದ ಮಾಡಿಸುತ್ತಾರೆನ್ನುವ ಮಾತನ್ನು ಹೇಳಿದ್ದಾರೆ. ಅದು ಏನಾದರು ಇದ್ದಿದ್ದರೆ ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅವರು ಏನಾದರೂ ಹೇಳಲಿ. ತಮ್ಮ ಬಾಯಿಂದ ಅದು ಬರಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಬಾಯಿಂದ ಬಂದುದ್ದನ್ನು ತೆಗೆದು ಹಾಕಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಈ ಮಾತು ಅವರ ಬಾಯಿಂದ ಬಂದಿದ್ದರೆ ತೆಗೆದುಹಾಕಿ. I get offended only when you say so, as I have not said that and you know very well that I never reflect anything.

ಅಧ್ಯಕ್ಷರು.—ಈಗ ಮುಕ್ತಾಯ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ಏನು ಸಂಸದೀಯ ಸಚಿವರು ಯಾವುದನ್ನು ದಾಖಲೆಯಿಂದ ಪ್ರೂವ್ ಮಾಡುವುದಕ್ಕೆ ಆಗುವುದಿಲ್ಲವೋ ಅಂತಹುದನ್ನು ಈ ಸದನ ಯಾವ ಆಧಾರದಮೇಲೆ ನಂಬಬೇಕು ? ಅದರಮೇಲೆ ಹಕ್ಕುಚ್ಯುತಿಯಾಗುತ್ತದೆಂದು ಯಾವುದನ್ನು ಹೇಳುತ್ತಾರೋ ಅದಕ್ಕೆ ಯಾವುದೇ ಆಧಾರ ವಿಲ್ಲ. ಅಂತಹ ವಿಚಾರವನ್ನು ಎತ್ತಿ ಈ ಸದನದ ಪರಂಪರೆಯನ್ನು ಕೆಡಿಸಲಿಕ್ಕೆ ಪ್ರಯತ್ನ ಮಾಡತಕ್ಕದ್ದನ್ನು ನಿಲ್ಲಿಸಬೇಕು. ರಾಜಕೀಯ ಅಸ್ತ್ರವನ್ನು ಬ್ರೀಚ್ ಆಫ್ ಪ್ರಿವಿಲೇಜು ಪ್ರಾವಿಜನ್‌ಗೆ ಉಪಯೋಗ ಮಾಡಿಕೊಳ್ಳುವುದನ್ನು ಖಂಡಿತವಾಗಿಯೂ ಖಂಡಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ. ಈ ಒಂದು ರಿವೇಂಜ್ ತೆಗೆದುಕೊಂಡು ಅಧಿಕಾರ ನಡೆಸುತ್ತೇವೆನ್ನುವ ಒಂದು ಹಂಬಲ ಒಂದು ಆಲೋಚನೆ ದುರಾಸೆ ಅವರಿಗೆ ಇದ್ದರೆ ಈ ರಾಜಕೀಯ ನಡೆಯುವುದಿಲ್ಲ. ಜನ ಸರಿಯಾಗಿ ಉತ್ತರ ಕೊಡುತ್ತಾರೆಂಬುದನ್ನು ಈ ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಇದು ಒಂದು ವಿಚಿತ್ರವಾದಂಥ ಪರಿಸ್ಥಿತಿ. ಈಗ ಹೋದ ವಾರ ನಾವು ಇದನ್ನು ಚರ್ಚೆ ಮಾಡಿದಾಗ a very peculiar situation was there. One week back when we discussed a privilege matter, I heard the Law Minister arguing, and also I heard the hon. Member Veerappa Moily arguing. Now they have changed places. ಆ ದಿವಸ ಮನೆಯ ಹೊರಗೆ ಹೇಳಿದಂಥ ಮಾತು ಈ ಮನೆಯಲ್ಲಿ ಪ್ರಿವಿಲೇಜ್ ಆಗುವುದಿಲ್ಲ ಎಂದು ಕಾನೂನು ಮಂತ್ರಿಗಳು ಹೇಳಿದಾಗ ಶ್ರೀ ವೀರಪ್ಪ ಮೊಯಿಲಿಯವರು ಯಾವ ರೀತಿಯಿಂದ ಗತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಇಲ್ಲಿ ಎರಡು ವಾದಗಳು ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಬ್ರಿಗೇಡ್ ರೋಡ್ ಎಂ.ಎಲ್.ಎ. ಬಗ್ಗೇನಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಸ್ವಾಭಾವಿಕವಾದಂಥ ಒಂದು ಪರಿಸ್ಥಿತಿ. ಇರತಕಂಥ ವಿಚಾರ ಮಾನ್ಯ ಶ್ರೀ ಕೆ. ಹೆಚ್. ಪಾಟೀಲರು ಮತ್ತು ಶ್ರೀ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. ಒಬ್ಬ ಗೌರವಾನ್ವಿತ ಕೇಂದ್ರ ಮಂತ್ರಿಗಳು, ಒಂದು ಆಲ್ ಇಂಡಿಯಾ ಪಕ್ಷವಾದಂಥ ಕಾಂಗ್ರೆಸ್ಸಿನ ಅಧ್ಯಕ್ಷರು ಒಂದು ಹೇಳಿಕೆಯನ್ನು ಕೊಟ್ಟಾಗ ಅದರ ಬಗ್ಗೆ ಈ ರೀತಿ ಲಘುವಾಗಿ ಹೇಳಬಾರದು ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ಹೇಳಿಕೆ ಕೊಟ್ಟಿಲ್ಲ ಎಂದರೆ ಎಲ್ಲೋ ಒಂದು ಮಾತನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರ ಭಾರತದಲ್ಲಿಯೇ ಒಂದು ಅತ್ಯಂತ ಹೆಸರಾದಂಥ ಪತ್ರಿಕೆ ' ಹಿಂದೂ ' ಪತ್ರಿಕೆಯಲ್ಲಿ ಬಂದಿದೆ.

(ಕಾಂಗ್ರೆಸ್ (ಐ) ಪಕ್ಷದ ಕೆಲವು ಸದಸ್ಯರು ಏಕಕಾಲದಲ್ಲಿ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಎಸ್, ಆರ್. ಬೊಮ್ಮಾಯಿ.—ಇಲ್ಲಿ ಸ್ವಲ್ಪ ಕೇಳಿ......

ಶ್ರೀ ಎಂ. ರಘುಪತಿ.—ಅವರು ತಪ್ಪು ಬರೆದಿದ್ದರೆ ಅವರ ಮೇಲೆ ಪ್ರಿವಿಲೇಜ್ ಮೂವ್ ಮಾಡಿ. ಆ ಪೇಪರಿನ ಮೇಲೆ ಮಾಡಿ.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಮಗೆ ಬೇರೆ ಕೆಲಸ ಇಲ್ಲವಾ ?

ಶ್ರೀ ಎಂ. ರಘುಪತಿ.—ಬೇರೆ ಕೆಲಸ ಇಲ್ಲದೇ ಇರುವುದರಿಂದ ಇಷ್ಟೆಲ್ಲಾ ಮಾತನಾಡುತ್ತಿರುವುದು'

SRI S. R. BOMMAI.—' Hindu ' is the most esteemed paper in gthiscountry which has served this country for more than a century and it is known for its authenticity in reporting. ' Hindu ' is known for its authenticity. If it is not a fact I would agree with my friends. They say such a statement is not made, such a speech is not made by the President. Then, what prevented him from denying it when it was published on 13th June ? Wh t prevented him ? Even in the publiic intrest if it is not a fact, it was his duty to deny it. He has not denied it to the press. He could have done it. Public will understand.

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ......

(ಗೊಂದಲ)

ಅಧ್ಯಕ್ಷರು.—ಅವರು ಹೇಳಿ ಮುಕ್ತಾಯ ಮಾಡಲಿ. ಶ್ರೀ ಖರ್ಗೆಯವರೇ ನಾನು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಬಗ್ಗೆ ಪತ್ರಿಕಾ ಸಂಪಾದಕರಿಗೆ ಅವರು ಬರೆಯಬೇಕಿತ್ತು. ಏಕೆ ಬರೆಯಲಿಲ್ಲ ? Because it is the truth, because it is a fact that he has not denied it.

SMT K.S. NAGARATANAMMA.—How did the reporter come in cow did the reporter got the news ? He was not invited. How culd he get it ? He was not invited at all.

ಅಧ್ಯಕ್ಷರು.—ನಾಗರತ್ನಮ್ಮನವರೇ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಪತ್ರಿಕೆಯವರು ಈ ಸುದ್ದಿಯನ್ನು ಹೇಗೆ ಬರೆಯುತ್ತಾರೆ ಎಂದರೆ ಇದು ಅವರ ಹಕ್ಕು ಮತ್ತು ಅವರ ಕರ್ತವ್ಯ. ಪತ್ರಿಕೆಯವರು ಸಭೆಯವರು ಸಭೆಯಲ್ಲಿ ಇದ್ದರೂ ಅಲ್ಲಿ ನಡೆದಿರುವುದನ್ನು ಅವರು ವರದಿ ಮಾಡುತ್ತಾರೆ. ಇದು ಅವರ ಚಾಣಾಕ್ಷತನ ಮತ್ತು ಅವರ ಸಾಮರ್ಥ್ಯ. ಅವರ ಕೆಲಸವೇ ಇದು. It is the Press. I must congratulate the Indian press for this.

ಶ್ರೀ ಎಂ. ವೀರಪ್ಪಮೊಯಿಲಿ.—ಲಂಕೇಶ್ ಪತ್ರಿಕೆಯವರಿಗೆ ನೀವೇ ಅವಾರ್ಡ್ ಕೊಟ್ಟಿದ್ದೀರಿ. He has charged the Chief Minister perjury.

(ಗೊಂದಲ)

SRI S.R. BOMMAI.—I must congratulate the press for its capcity to get the information. ಆ ಸಂಪಾದಕರನ್ನು, ಆ ಕರೆಸ್‌ಪಾಂಡೆಂಟ್‌ನ್ನು ಕಂಗ್ರಾಜುಲೇಟ್ ಮಾಡುತ್ತಿದ್ದೇನೆ. ಯಾವಾಗ, ಯಾರ ಬಗ್ಗೆ ಈ ವಿಚಾರ ಹೇಳಿದರೋ, ಅವರು ನಿರಾಕರಣೆ ಮಾಡಿಲ್ಲ; ಆದ್ದರಿಂದ ಇದು ಸತ್ಯ ಎಂದು ಗ್ರಹಿಸಬೇಕಾಗುತ್ತದೆ. ಇನ್ನೊಂದು ವಿಚಾರ, ಮಾನ್ಯ ಮೊಯ್ಲಿಯವರು ಇನ್ನೊಂದು ವಿಚಾರವನ್ನು ಹೇಳಿದರು...

(ಗೊಂದಲ)

ಅಧ್ಯಕ್ಷರು.—ತಾವು ದಯಮಾಡಿ ಕೂಡಿ, ಅವರು ಮುಕ್ತಾಯ ಮಾಡಲಿ.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಮುಖ್ಯಮಂತ್ರಿಗಳು, ಅವರೆಲ್ಲರಿಗೂ ಕರೆಪ್ಟ್ ಎಂದು ಹೇಳಿದರು, ಮಿನಿಸ್ಟರು ಕರೆಪ್ಟ್, ಆಫೀಸರ್ಸ್ ಕರೆಪ್ಟ್, ನಮ್ಮ ಮೆಂಬರ್ಸ್ ಕರೆಪ್ಟ್ ಎಂದು ಎಲ್ಲಾ ಪತ್ರಿಕೆಯಲ್ಲೂ ಜಗಜ್ಜಾಹಿರಾತಾಯಿತು. ಯಾರಾದರೂ, ಎಲ್ಲಾದರೂ ಬಂದು ಇದು ತಪ್ಪು ಎಂದು ಹೇಳಿದರೇ, ಇದು ಸುಳ್ಳು ಎಂದು ಹೇಳಿದರೆ, ಇದನ್ನು ಯಾರಾದರು ಡಿನೈ ಮಾಡಿದರೇ? ಹಾಗಾದರೆ ಅದೆಲ್ಲಾ ಸರಿಯೇ.

ಶ್ರೀ ಎಸ್.ಆರ್. ಬೊಮ್ಮಾಯಿ.—ನನಗೆ ಅದು ಗೊತ್ತಿಲ್ಲ. ಕೇಳಿ ಸ್ವಲ್ಪ. ಇವತ್ತು ಅವರು ಹೇಳಿದಂಥ ವಿಚಾರವನ್ನು ಅವರು ಓದಿ ಹೇಳಿದರು. ಯಾವುದು ಪ್ರಿವಿಲೇಜ್ ಆಗುತ್ತದೆ ಎಂದು. ತಾವು 1962 ರಿಂದ ಈ ಮನೆಯ ಸದಸ್ಯರಾಗಿದ್ದೀರಿ. ಇಂತಹ ವಿಚಾರ ಯಾವುದೂ ಬರಲಿಲ್ಲ. ಇಂತಹ ವಿಚಾರ ಪ್ರಿವಿಲೇಜ್ ಆಗುವುದಿಲ್ಲ ಎನ್ನುವ ಮಾತು ಬೇರೆ. ಆದರೆ ಯಾರೂ ಈ ರೀತಿ ಹೇಳಲಿಲ್ಲ, ಯಾವ ಅಧ್ಯಕ್ಷರೂ ಹೇಳಲಿಲ್ಲ. ಅಸೆಂಬ್ಲಿ ಪ್ರೊಸೀಡಿಂಗ್ಸ್ ಸ್ಟಾಲ್ ಮಾಡಿ ಎಂದು ಯಾರೂ ಹೇಳಲಿಲ್ಲ......

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವ ಅಧ್ಯಕ್ಷರೂ ಹೇಳಲಿಲ್ಲ, ಆದ್ದರಿಂದ ಇದು ಪ್ರಿವಿಲೇಜ್ ಆಗುತ್ತದೆಯೇ...... It is a very fantastic argument. ಯಾವ ಅಧ್ಯಕ್ಷರೂ ಹೇಳಿಲ್ಲ, ಆದ್ದರಿಂದ, I think you are fit to write a book on this, instead of Kaul and Shakdhar.

ಶ್ರೀ ಧರ್ಮಸಿಂಗ್.—ಈ ತರಹ ಯಾವ ಅಧ್ಯಕ್ಷರೂ ಹೇಳಿಲ್ಲ, ಯಾವ ಅಧ್ಯಕ್ಷರ ಮೇಲೂ ಈ ತರಹದ್ದು ತಂದಿಲ್ಲ. ಮೊಟ್ಟ ಮೊದಲನೆಯದಾಗಿ ನಮ್ಮ ಪಾರ್ಟಿ ಅಧ್ಯಕ್ಷರ ಬಗ್ಗೆ ನಿಮಗೆ ಅಂಜಿಕೆ ಹುಟ್ಟಿದೆ, ನೀವೆಲ್ಲಾ ಹೆದರಿದ್ದೀರಿ...

ಶ್ರೀ ಎಸ್. ಆರ್. ಬೊಮ್ಮಾಯಿ.—ನಮಗೆ ಅಂಜಿಕೆ ಇಲ್ಲ. ನಾನು ಬೇಡಿಕೊಳ್ಳುತ್ತೇನೆ, ಅವರೇ ಅಧ್ಯಕ್ಷರಾಗಿ ಮುಂದುವರಿಯಲಿ ಎಂದು. ಇದು ಏನಾಗುತ್ತದೋ ಅದು ಬೇರೆ ವಿಚಾರ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ತಮ್ಮ ಬಗ್ಗೆ ಗೌರವ ಇದೆ. ತಾವು ಹಿರಿಯರು ಸದಸ್ಯರಿದ್ದೀರಿ, ಆದರೆ ಮಾನ್ಯ ಲಕ್ಷ್ಮಿಸಾಗರ್ ಅವರ ಮಾತಿಗೆ ಬೆಂಬಲ ಕೊಡಬೇಡಿ. ಈ ಸದನದಿಂದ ಇವತ್ತು ಸಂತೋಷದಿಂದ ಹೋಗೋಣ.

(ಗೊಂದಲ)

ಅಧ್ಯಕ್ಷರು.—ತಾವು ಕೂಡಿ, ಆಮೇಲೆ ಖರ್ಗೆಯವರಿಗೆ ಅವಕಾಶ ಕೊಡುತ್ತೇನೆ. I have allowed the Hon. Minister to say.

S. R. BOMMAI.—Sir, an unprecedented statement has been made by a President of a political party. How precedents are created by this House ? ಯಾವುದೋ ಒಂದು ವಿಚಾರ ಹೇಳುತ್ತಾರೆ, ಇದು ಸರಿ ಇಲ್ಲ

ವೆಂದು ಈ ಮನೆಯಲ್ಲಿ ಬರುತ್ತದೆ. ಸರಿಯೋ, ತಪ್ಪೋ ಎಂಬುದನ್ನು ನೀವು ನಿರ್ಣಯ ತೆಗೆದು ಕೊಂಡ ಮೇಲೆ ಪ್ರಿಸಿಡೆಂಟ್ ಆಗುತ್ತದೆ. ಹಿಂದೆ ಯಾರು ಹೇಳಿಲ್ಲ, ಇದು ಪ್ರಿವಿಲೇಜ್ ಆಗುವುದಿಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ನಾವು ಹೇಳಿದ್ದು ಆಗಿಲ್ಲ, ನಡೆದಿಲ್ಲ. ಪ್ರೆಸ್‌ನಲ್ಲಿ ಬಂದಿದೆ ಎಂದು ಇದನ್ನು ಇಲ್ಲಿ ತರಬೇಡಿರಿ. ..

ಶ್ರೀ ಎಂ. ರಘುಪತಿ.—ನೀವೇಕೆ ಇದನ್ನು ಹೇಳುತ್ತೀರಿ, ಮಾನ್ಯ ಪೂಜಾರಿಯವರೇ ಹೇಳಲಿ, ಅವರು ಅಧ್ಯಕ್ಷರು ಇರಬಹುದು. ಪೂಜಾರಿಯವರು ಇವತ್ತು ಒಂದು ಸ್ಟೇಟ್‌ಮೆಂಟ್ ಕೊಡಲಿ, ಈತರಹ ಹೇಳಿಲ್ಲ ಎಂದು, ಇದನ್ನು ಮಾಡಿಲ್ಲ ಎಂದು ಅಥವಾ ಪೂಜಾರಿಯವರ ಪರವಾಗಿ ಕೈ ಇಡಲಿ...

SRI K. H PATIL.—Have we stalled your proceedings ?

(ಗೊಂದಲ)

SRI S. R. BOMMAI.—Whoever he may be, however great he may be, whatever office one may hold, he cannot direct anybody to stall the proceedings of this House. He cannot direct: It is a direction that such and such proceedings should be stalled, and this House has a right.........

ಶ್ರೀ ಧರ್ಮಸಿಂಗ್.— ಈ ಮನೆಯ ಕಾರ್ಯಕಲಾಪ ಪ್ರಾರಂಭವಾಗಿ ಒಂದೂವರೆ ತಿಂಗಳಾಯಿತು. ನಾವು ಎಂದಾದರೂ ಈ ರೀತಿ ಮಾಡಿದ್ದೇವೆಯೋ ?

ಅಧ್ಯಕ್ಷರು.—ಅವರು ಹೇಳುವುದನ್ನು ಕೇಳಿ. ಅವರು ಹೇಳುವುದನ್ನು ಕೇಳುವುದಕ್ಕೆ ನೀವು ತಯಾರಿಲ್ಲವೇ ? ಅವರು ಹೇಳುವುದನ್ನು ಕೇಳಿ ಆಮೇಲೆ ನಾನು ಖರ್ಗೆಯವರಿಗೆ ಅವಕಾಶ ಮಾಡಿ ಕೊಡುತ್ತೇನೆ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ತಪ್ಪು ತಪ್ಪನ್ನೇ ಹೇಳುವುದು, ಅಸತ್ಯವನ್ನು ಹೇಳುವುದೇ ಇವರಿಗೆ ಅಭ್ಯಾಸವಾಗಿಬಿಟ್ಟಿದೆ. ಒಮ್ಮೆ ರಿಟ್ ಅಡ್ಮಿಟ್ ಆಗಿಲ್ಲದಿರುವುದನ್ನು ರಿಟ್ ಅಡ್ಮಿಟ್ ಆಗಿದೆ ಅಂತ ಅಸತ್ಯವನ್ನು ಹೇಳಿರುವುದನ್ನು ನಾವು ಕೇಳಿಲ್ಲವೇ ? ಅಸತ್ಯವನ್ನು ಹೇಳುವುದೇ ಇವರಿಗೆ ಅಭ್ಯಾಸವಾಗಿ ಹೋಗಿಬಿಟ್ಟಿದೆ.

(ಗೊಂದಲ)

ಅಧ್ಯಕ್ಷರು.—ಕೊನೆಯ ದಿವಸ ಏಕೆ ಹೀಗೆ ಮಾಡುತ್ತಿದ್ದೀರಿ ? ಅವರು ಏನು ಹೇಳುತ್ತಾರೆಂಬುದನ್ನು ಕೇಳಿ. ಅವರು ಏನು ಹೇಳುತ್ತಾರೋ ಹೇಳಲಿ. ಆಮೇಲೆ ಖರ್ಗೆಯವರಿಗೆ ಅವಕಾಶ ಕೊಡುತ್ತೇನೆ. ಶ್ರೀಮತಿ ನಾಗರತ್ನಮ್ಮನವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—Here we are not concerned.. ...

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಬೊಮ್ಮಾಯಿಯವರೇ, ತಾವು ಈಲ್ ಆಗುವುದಾದರೆ ಒಂದು ಮಾತನ್ನು ಹೇಳುತ್ತೇನೆ. ಏಕೆಂದರೆ ಸ್ಟಾಲ್ ವಿಚಾರ ಹೇಳಿದ್ದೀರಿ. ತಮಗೆ ನೆನಪು ಇರಬಹುದೆಂದು ಕಾಣುತ್ತದೆ. ಗುಜರಾತಿನಲ್ಲಿ ಏನಾಯಿತೆಂಬುದು ತಮಗೂ ಗೊತ್ತಿದೆ. ಎಮರ್ಜೆಯನ್ಸಿಗೆ ಮೊದಲು ಏನಾಯಿತು ಅಲ್ಲಿ ? ತಮ್ಮ ಜೆ. ಪಿ. ಮೂವ್‌ಮೆಂಟ್ ಏನಾಯಿತು ? ಡ್ಯೂಲಿ ಎಲೆಕ್ಟೆಡ್ ಅಸೆಂಬ್ಲಿ ನಡೆಯಬಾರದು ಅಂತ ಹೇಳಿ you wanted to dissolve and let all the

MLAs resing and ask not to function. ಅದಕ್ಕಿಂತ ದೊಡ್ಡದು ಇದೆಯೇ ? It is a question of destablisation of the whole democratic institution. Stalling means, at the most it is putting the pressure on the government not to do certain things. At the most it may amount to that. ಆದರೆ ಡ್ಯೂಲಿ ಎಲೆಕ್ಟೆಡ್ ಬಾಡಿ ಲೋಕಸಭೆಯನ್ನೇ ನಡೆಯಬಾರದು ಅಂತ ಆಗಿರುವುದು ತಮಗೆ ಗೊತ್ತಿದೆ ಅಲ್ಲವೇ ?

Sri S. R. BOMMAI.—I was on the point. Here is a person whatever may be his status or the office he holds, directly asking the legislators to stall the proceedings of the House, is it not...

Smt K. S. Nagarathnamma,—I take objection to this. How do you know that ? What is the way of knowing it ?

ಅಧ್ಯಕ್ಷರು.—ಬೊಮ್ಮಾಯಿಯವರೇ ತಾವು ದಯವಿಟ್ಟು ಮುಗಿಸಿಬಿಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—Iam on a point of Order. How does he know that ? ಇವರು ಯಾರನ್ನು ಕಳುಹಿಸಿದರು ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಇವರ ಮುಖ್ಯಮಂತ್ರಿಗಳೇ ಹೇಳಿದರು. ಏನೆಂದರೆ ಎಲ್ಲ ಎಂ. ಎಲ್. ಎ. ಗಳನ್ನು ಹಿಡಿದು ಹಿಡಿದು ರಾಜೀನಾಮೆಯನ್ನು ಕೇಳಿ ಅಂತ ಹೇಳಿದರು. What moral right has he got ? ನಿಮ್ಮ ಕ್ಷೇತ್ರದೊಳಗೆ ಬಂದಾಗ ನಿಮ್ಮ ಎಂ. ಎಲ್. ಎ. ಗಳನ್ನು ಹಿಡಿದು ರಾಜೀನಾಮೆಯನ್ನು ಕೊಡಿ ಅಂತ ಹೇಳಿದಂತಹವರು ನಿಮಗೆ ಆ ರೀತಿ ಹೇಳುವುದಕ್ಕೆ ಹಕ್ಕು ಏನು ಇದೆ ?

ಅಧ್ಯಕ್ಷರು.—ಇದು ವಿಧಾನ ಸೌಧ, ವಿಧಾನ ಸಭೆ. ಸಂತೆಯಲ್ಲ. ಬೊಮ್ಮಾಯಿಯವರೇ ತಾವು ಮುಗಿಸಿ ಬಿಡಿ.

(ಗೊಂದಲ)

Sri S. R. BOMMAI.—This is a clear case where privilege is attracted and if we fail to take action anybody can anything about the legislature, anybody may commit any act of contempt, in future anybody can say anything about rules of procedure of this House, ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ. it is the most fit case. ಇದು ಪ್ರಿವಿಲೇಜ್ ಆಗುತ್ತದೆ. ಅವರನ್ನು ಈ ಮನೆಯ ಮುಂದೆ ಕರೆಸಬೇಕಾಗುತ್ತದೆ. ಛೀಮಾರಿ ಹಾಕಬೇಕಾಗುತ್ತದೆ. ಸರಿಯಾಗಿ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಿಮಗೆ ಆ ರೀತಿ ಹೇಳುವುದಕ್ಕೆ ಏನು ಹಕ್ಕು ಇದೆ ?

(ಗೊಂದಲ)

ಅಧ್ಯಕ್ಷರು.—ಅವರು ಮೋಸ್ಟ್ ಫಿಟ್ ಕೇಸ್ ಅಂತ ಹೇಳಿದ್ದಾರೆ. ನೀವು ಮೋಸ್ಟ್ ಅನ್‌ಫಿಟ್ ಕೇಸ್ ಅಂತ ಹೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ಮೋಸ್ಟ್ ಅನ್‌ಫಿಸ್ ಕೇಸ್.

ಅಧ್ಯಕ್ಷರು.—ಖಾರ್ಗೆಯವರೇ ನೀವು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈಗಾಗಲೇ ನನಗಿಂತ ಮೊದಲು ಈ ಮನೆಯ ಹಿರಿಯ ಸದಸ್ಯರು, ಮತ್ತು ಮಂತ್ರಿಗಳು ಹಾಗೂ ಈ ಮನೆಯ ಬಹಳ ಅನುಭವ ಇರತಕ್ಕ ವ್ಯಕ್ತಿಗಳೂ ಕೂಡ ಸಮರ್ಥನೆ ಮಾಡತಕ್ಕ ರೀತಿಯಲ್ಲೇ ಮಾತನಾಡಿದರು. ಈಗಾಗಲೇ ಮಾನ್ಯ ಪಾಟೀಲ್‌ರವರು ಮತ್ತು ಶ್ರೀಮಾನ್ ವೀರಪ್ಪ ಮೊಯ್ಲಿಯವರು ಬಹಳ ಚೆನ್ನಾಗಿ ಹೇಳಿದರು. ಅದು ಏನೆಂದರೆ, ಅದು

ನಮ್ಮ ಪಕ್ಷದ ಮೀಟಿಂಗ್. ನಮ್ಮ ಪಕ್ಷದ ಸಭೆಯಲ್ಲಿ ಪತ್ರಿಕಾ ಕರ್ತರನ್ನು ಕರೆಸುವುದಿಲ್ಲ. ಏಕೆಂದರೆ ಅವರು ಅಧ್ಯಕ್ಷರಾದ ಮೇಲೂ ಈ ವಿಚಾರವನ್ನು ಹೇಳಿದರು ನನಗೂ ಕೂಡ ಗೊತ್ತಿದೆ. ಒಂದು ವೇಳೆ ಏನಾದರು ಹೇಳುವುದಿದ್ದರೆ, ಮೀಟಿಂಗ್ ಆದ ಮೇಲೆ ಪ್ರೆಸ್‌ನವರಿಗೆ ಬ್ರೀಫ್ ಮಾಡುತ್ತಾರೆ. ಯಾರೂ ಕೂಡ ನಮ್ಮ ಪಕ್ಷದ ಸಭೆಗಳಿಗೆ, ಕಾರ್ಯಕರ್ತರ ಸಭೆಗೆ ಎಕ್ಸಿಕ್ಯೂಟೀವ್ ಕಮಿಟಿ ಮೀಟಿಂಗ್‌ಗೆ ಪತ್ರಕರ್ತರನ್ನು ಕರೆಸುವುದಿಲ್ಲ. ಆ ಕಾರಣ ಇದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಿದರೂ ಕೂಡ ಮಾನ್ಯ ಲಕ್ಷ್ಮೀಸಾಗರ್‌ರವರು ನಂಬಲಿಲ್ಲ. ಇದಕ್ಕೆ ನಾನು ಹೇಳತಕ್ಕಂಥಾದ್ದು ಇಷ್ಟೇ. ಇವತ್ತು ಜನರ ಅಭಿಪ್ರಾಯವನ್ನು ತಮ್ಮ ಪಕ್ಷದಲ್ಲಿರುವ ಒಡಕು ಏನಿದೆ ಅದನ್ನು ಮುಚ್ಚಿಕೊಳ್ಳುವುದಕ್ಕೆ ಸಾರ್ವಜನಿಕರಲ್ಲಿ ಈ ಇಶ್ಯೂ ರೈಜ್ ಮಾಡಿದ್ದಾರೆ......

ಶ್ರೀ ವೇದಾಂತ ಹೆಮ್ಮಿಗೆ.—ಒಗ್ಗಟು ಇದೆ ಎಂದು ನಾವು ಇವತ್ತು ತೋರಿಸಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ತಮಗೆ ಗೊತ್ತಿದೆ. ಸತತವಾಗಿ ಒಂದೂವರೆ ತಿಂಗಳಾಯಿತು. ಅನೇಕ ಗಂಭೀರವಾದ ಸಮಸ್ಯೆಗಳು ಬಂದಾಗ ಅದು ಬಾಟ್ಲಿಂಗ್ ಹಗರಣವಿರಬಹುದು ಸ್ಪಿರೀಟ್ ಸ್ಕ್ಯಾಂಡಲ್ ಇರಬಹುದು, ರೇವಜೀತು ಇರಬಹುದು. ಎಂ. ಡಿ. ಸೀಟು ಸ್ಕ್ಯಾಂಡಲ್ ಇರಬಹುದು. ಆಡಳಿತದಲ್ಲಿ ಲಂಚಗುಳಿತನವಿರಬಹುದು ಯಾವುದೇ ವಿಚಾರಗಳಿದ್ದರೂ ಸಹ ನಾವು ಚರ್ಚೆ ಮಾಡಿದ್ದೇವೆ. ಇವತ್ತಿನ ದಿವಸ ಮುಖ್ಯವಾಗಿ ಒಬ್ಬ ಪಾರ್ಲಿಮೆಂಟ್ ಸದಸ್ಯರಿಗೆ ಅಪಮಾನ ಮಾಡಬೇಕೆನ್ನುವ ದೃಷ್ಟಿಯಿಂದ ಮತ್ತು ನಮ್ಮ ಪಕ್ಷಕ್ಕೆ ಕಳಂಕ ತರಬೇಕೆನ್ನುವ ದೃಷ್ಟಿಯಿಂದ ನಮ್ಮ ಪಕ್ಷಕ್ಕೆ ಮಸಿ ಬಳಿಯಬೇಕೆನ್ನತಕ್ಕಂಥ ದೃಷ್ಟಿಯಿಂದ ಮಾನ್ಯ ಬೊಮ್ಮಾಯಿಯವರು ಇವತ್ತು ಇಂತಾದ್ದನ್ನು ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ...

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಮಾನ್ಯ ಬೊಮ್ಮಾಯಿಯವರು ಆಡಿದ ಮಾತುಗಳನ್ನು ವಾಪಸ್ ತೆಗೆದುಕೊಳ್ಳಬೇಕು...

(ಗೊಂದಲ)

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನ ಪೋಡಿಯಂನಲ್ಲಿ ಬಂದು ಕೂಗಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು.—ಎರಡೂ ಕಡೆಯವರು ಏನಾದರೂ ಆಡಬಾರದ ಮಾತುಗಳನು ಆಡಿದ್ದರೆ ಅದನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ.

(ಗೊಂದಲ)

(ವಿರೋಧ ಪಕ್ಷವಾದ ಕಾಂಗ್ರೈನ ಮಾನ್ಯ ಸದಸ್ಯರುಗಳೆಲ್ಲಾ ಅಧ್ಯಕ್ಷ ಪೀಠದ ಮುಂದೆ ಇರುವ ಜಾಗದಲ್ಲಿ ನಿಂತು ಕೊಂಡು ಅಧ್ಯಕ್ಷರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು)

(ವಿಪರೀತ ಗೊಂದಲ)

ಅಧ್ಯಕ್ಷರು.—ದಯವಿಟ್ಟು ನಿಮ್ಮ ನಿಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ. ದಯವಿಟ್ಟು ಹೋಗಿ.

(ಗೊಂದಲ)

ಅಧ್ಯಕ್ಷರು.—ನೋಡಿ, ತಾವು ದಯವಿಟ್ಟು ಹೋಗಿ.

(ಗೊಂದಲ)

ಅಧ್ಯಕ್ಷರು.—ನಾನು ಆ ಬಗ್ಗೆ ಇನ್ನೂ ರೂಲಿಂಗ್ ಕೊಟ್ಟಿಲ್ಲ. ತಾವು ಸ್ವಲ್ಪ ಕೇಳಿ.

(ಗೊಂದಲ)

ಅಧ್ಯಕ್ಷರು.—ಅಂಥಾದ್ದೇನಾದರು ಇದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

(ಗೊಂದಲ)

ಶ್ರೀ ಎಸ್. ಆರ್, ಬೊಮ್ಮಾಯಿ.—ಆ ವಿಷಯ ಇರಲಿ. ಅದೇನು ಅನ್‌ಪಾರ್ಲಿಯಮೆಂಟರಿ ವರ್ಡ್ ಅಲ್ಲ.

(ಗೊಂದಲ)

ಅಧ್ಯಕ್ಷರು.—ಜನಾರ್ಧನ ಪೂಜಾರಿಯವರ ಬಗ್ಗೆ ಇವರು ಮಾತನಾಡಿದ್ದಾರೆ ಎನ್ನುವ ಬಗ್ಗೆ ನಾನು ಜನಾರ್ಧನ ಪೂಜಾರಿಯವರಿಗೇ ಪತ್ರ ಬರೆದು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಜನಾರ್ಧನ ಪೂಜಾರಿಯವರ ಅಭಿಪ್ರಾಯ ಪಡೆದು ಮುಂದಿನ ಕ್ರಮ ತೆಗೆದು ಕೊಳ್ಳುತ್ತೇನೆ.

(ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಅಧ್ಯಕ್ಷರ ಆದೇಶದಂತೆ ತಮ್ಮ ತಮ್ಮ ಸೀಟುಗಳಿಗೆ ಹೋಗಲಿಲ್ಲ)

(ಗೊಂದಲ)

ಅಧ್ಯಕ್ಷರು.—ಸಭೆಯನ್ನು ಅನಿರ್ದಿಷ್ಟ ಕಾಲ ಮುಂದೂಡಿದ್ದೇನೆ.

(ಸಭೆಯು ೨ ಗಂಟೆ ೩೦ ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)